
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

14 ಜನವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 302 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಆಸ್ಟ್ರೇಲಿಯಾದ ಅಲಿಸಾ ಹೀಲಿ ಅವರು ತವರಿನಲ್ಲಿ ಭಾರತ ವಿರುದ್ಧ ಮಾರ್ಚ್‌ನಲ್ಲಿ ನಡೆಯಲಿರುವ ಸರಣಿಯ ಬಳಿಕ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ.




ಗಾರ್ಡನ್ ಸಿಟಿಯಲ್ಲ, ಸಿಲಿಕಾನ್ ಸಿಟಿಯೂ ಅಲ್ಲ... ಕ್ರೈಂ ಸಿಟಿ! » 2



ಅಸುರಕ್ಷಿತ ಲೈಂಗಿಕ ಸಂಪರ್ಕವೇ ಹೆಚ್‌ಐವಿಗೆ ಕಾರಣ » 3



ಕುಮಾರಸ್ವಾಮಿ 2 ಬಾರಿ ಬಾಡಿಗೆ ಆಧಾರ ಸಿಎಂ » 4


# ಸ್ಥಳೀಯ ಸಂಸ್ಥೆ ಚುನಾವಣೆಗೆ ಸರ್ಕಾರ ಸಿದ್ಧ: ಸಿ.ಎಂ.

## ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿಯಾದ ಸಿದ್ದರಾಮಯ್ಯ - ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು:** ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ರಾಜ್ಯ ಸರ್ಕಾರ ಸಿದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಮಂಗಳವಾರ ಮೈಸೂರು ವಿಮಾನ ನಿಲ್ದಾಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಜೊತೆಗೆ ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ ಹಾಗು ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೆ ನಾವು ತಯಾರಾಗಿದ್ದೇವೆ. ಈ ಚುನಾವಣೆಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯು ಯಾವುದೇ ಪರಿಣಾಮ ಬೀರುವುದಿಲ್ಲ. ಆ ಎರಡೂ ಪಕ್ಷದಿಂದ ಒಬ್ಬರೇ ಅಭ್ಯರ್ಥಿ ಆಗುತ್ತಾರೆ. ಕಾಂಗ್ರೆಸ್ ಪರ ಬೀಳುವ ಮತಗಳು ನಮ್ಮ ಅಭ್ಯರ್ಥಿಗೆ ಬಿದ್ದೇ ಬೀಳುತ್ತವೆ ಎಂದರು.

**ಮಾರ್ಚ್‌ನಲ್ಲಿ ಬಜೆಟ್**

ಮಾರ್ಚ್ ಮೊದಲ ವಾರದಲ್ಲಿ ರಾಜ್ಯ ಬಜೆಟ್ ಮಂಡಿಸಲಿದ್ದೇನೆ. ವಿಶೇಷ ಅಧಿವೇಶನ ನಡೆಸುವ ಬಗ್ಗೆ ಬುಧವಾರ ವಿಶೇಷ ಸಚಿವ ಸಂಪುಟ ಸಭೆ ಕರೆದಿದ್ದು, ಅಲ್ಲಿ ಚರ್ಚಿಸುತ್ತೇವೆಂದು ಮಾಹಿತಿ ನೀಡಿದರು. ಸಂಪುಟ ಪುನರ್ ರಚನೆ ಬಗ್ಗೆ ಸದ್ಯ ಯಾವುದೇ ಚರ್ಚೆ ಇಲ್ಲ. ದೆಹಲಿಗೂ ಹೋಗುತ್ತಿಲ್ಲ ಎಂದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಬರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿ ಅವರು ಅನಾರೋಗ್ಯದಿಂದ ಚೇತರಿಸಿಕೊಂಡಿದ್ದು, ಈಗ ಕ್ರಿಯಾಶೀಲರಾಗಿದ್ದಾರೆ. ಅವರು ರಾಜ್ಯ ರಾಜಕಾರಣಕ್ಕೆ ಬರುತ್ತಾರೋ, ಇಲ್ಲವೋ ನಮಗೆ ಗೊತ್ತಿಲ್ಲ. ಅದೆಲ್ಲವನ್ನೂ ಮಾಧ್ಯಮಗಳೇ ಹೇಳಬೇಕು ಎಂದರು.

**ರಾಜಕಾರಣ ಚರ್ಚೆ ಮಾಡಿಲ್ಲ**

ರಾಹುಲ್ ಗಾಂಧಿ ಅವರು ಗೂಡ್ಲೂರಿನ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬಂದಿದ್ದು, ಅವರನ್ನು ನಾವೆಲ್ಲಾ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿದ್ದೇವೆ.

» ಮೂರನೇ ಪುಟದಲ್ಲಿ



### ರಾಹುಲ್ ಜೊತೆ ಪ್ರತ್ಯೇಕ ಮಾತುಕತೆ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಮಿಳುನಾಡು ಪ್ರವಾಸ ಮುಗಿಸಿ ದೆಹಲಿಗೆ ವಾಪಸ್ ಆಗುವ ಮಾರ್ಗ ಮಧ್ಯೆ ಮೈಸೂರು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಕೆಲ ನಿಮಿಷ ಪ್ರತ್ಯೇಕ ಮಾತುಕತೆ ನಡೆಸಿರುವುದು ಕುತೂಹಲ ಮೂಡಿಸಿದೆ.

ರಾಹುಲ್‌ಗಾಂಧಿ ಅವರನ್ನು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಭೇಟಿಯಾದರು. ಈ ವೇಳೆ ವಿಮಾನದ ಬಳಿಯೇ ಇಬ್ಬರೊಂದಿಗೂ ರಾಹುಲ್ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ಜೆ. ಜಾರ್ಜ್, ಕೆ.ವೆಂಕಟೇಶ್ ಜೊತೆಗಿದ್ದರು.

### ಚುನಾವಣೆ ನಡೆಯಬೇಕು

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು ನಡೆಯಬೇಕು. ಸಂವಿಧಾನದ 73 ಹಾಗು 74ನೇ ತಿದ್ದುಪಡಿ ಅನುಸಾರ ಏನೆಲ್ಲಾ ತೀರ್ಮಾನ ಮಾಡಬೇಕೋ ಅದನ್ನು ಸರ್ಕಾರ ಮಾಡಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ತಾಂತ್ರಿಕ ಆಕ್ಷೇಪಣೆಗಳ ಬಗ್ಗೆ ಪ್ರತಿಕ್ರಿಯಿಸಿ, ಕೆಲವರು ಆಕ್ಷೇಪಣೆ ಸಲ್ಲಿಸುತ್ತಾರೆ. ಅದಕ್ಕೆ ಸಮಿತಿ ರಚಿಸಲಾಗಿದ್ದು, ಅದು ತೀರ್ಮಾನ ಮಾಡಲಿದೆ. ರಾಜ್ಯ ಚುನಾವಣಾ ಆಯೋಗ ಚುನಾವಣೆ ನಡೆಸಲಿದ್ದು, ಅವರಿಗೆ ಏನು ನಿರ್ದೇಶನ ನೀಡ ಬೇಕೋ ನೀಡುತ್ತೇವೆ. ಮೀಸಲಾತಿ ವಿಚಾರವಾಗಿ ಮಹಿಳೆಯರಿಗೆ ಕಡಿಮೆಯಾಗಿದೆ ಎಂಬ ಮಾತು ಕೇಳಿ ಬಂದಿವೆ. ಅದನ್ನು ನಾನು ಗಮನಿಸಿಲ್ಲ. ಪರಿಶೀಲಿಸಿ ತಪ್ಪಾಗಿದ್ದರೆ ಸರಿಪಡಿಸಲು ಅವರಿಗೆ ಸೂಚಿಸಲಾಗುವುದು. ನಾವು ಯಾವುದರಲ್ಲೂ ಹಸ್ತಕ್ಷೇಪ ಮಾಡುವುದಿಲ್ಲವೆಂದು ತಿಳಿಸಿದರು.

ಚುನಾವಣೆ ನಡೆಸುವುದು ನಮ್ಮ ಕರ್ತವ್ಯ. ಕಾರ್ಯಕರ್ತರಿಗೆ ಅಧಿಕಾರ ಕೊಡುವ, ಹೊಸ ನಾಯಕರನ್ನು ತಯಾರು ಮಾಡುತ್ತಿದ್ದೇವೆ. ನಾವು ಮಾಡುತ್ತಿರುವ ಕೆಲಸಕ್ಕೆ ಜನರು ಬೆಂಬಲ ನೀಡುವ ವಿಶ್ವಾಸವಿದೆ. ನಾವು ಐದೂ ಪಾಲಿಕೆಗಳಲ್ಲೂ ಗೆಲ್ಲುತ್ತೇವೆ ಎಂದರು.

# ಕಾಡಾನೆ ದಾಳಿಗೆ ಮಹಿಳೆ ಬಲಿ

## ಶವ ಮೇಲೆತ್ತಲು ಬಿಡದೆ ಸ್ಥಳದಲ್ಲೇ ಪ್ರತಿಭಟನೆ : ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

• ಪ್ರಜೋದಯ ವರದಿ

**ಸಕಲೇಶಪುರ :** ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆ ಮೇಲೆ ಕಾಡಾನೆ ದಾಳಿ ನಡೆಸಿ ತುಳಿದು ಕೊಂದು ಹಾಕಿರುವ ಘಟನೆ ತಾಲ್ಲೂಕಿನ ಮೂಗಲಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ನಡೆದಿದೆ. ಶೋಭಾ (40) ಮೃತ ಮಹಿಳೆ.

ಕಾಫಿ ತೋಟಕ್ಕೆ ಸುಣ್ಣ ಹಾಕುವ ಕೆಲಸಕ್ಕೆ ಪುತ್ರಿಯರಾದ ಶೋಭ ಮತ್ತು ರಾಗಿಣಿ ಜೊತೆ ರಾಜಮ್ಮ ಅವರು ತೆರಳಿದ್ದರು. ಕೆಲಸ ಮಾಡುತ್ತಿದ್ದ ವೇಳೆ ಏಕಾಏಕಿ ಕಾಡಾನೆ ದಾಳಿಗೆ ಮುಂದಾಗಿದೆ. ಕಾಡಾನೆಯಿಂದ ತಪ್ಪಿಸಿಕೊಳ್ಳಲು ಮೂವರು ಓಡಿದರು. ಶೋಭಾ ಅವರನ್ನು ಬೆನ್ನಟ್ಟಿದ ಸಲಗ ತುಳಿದು ಸ್ಥಳದಲ್ಲೇ ಸಾಯಿಸಿದೆ. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಧಾವಿಸಿದರು.

ಕಾಡಾನೆ ದಾಳಿಯಿಂದ ಮಹಿಳೆ ಮೃತಪಟ್ಟಿದ್ದರಿಂದ ಆಕ್ರೋಶಗೊಂಡ ಗ್ರಾಮಸ್ಥರು, ಮೃತದೇಹವನ್ನು ಸ್ಥಳದಲ್ಲೇ ಇಟ್ಟು ಶವ ಮೇಲೆತ್ತಲು ಬಿಡದೆ ಧರಣಿ ನಡೆಸಿದರು. ಅರಣ್ಯಾಧಿಕಾರಿ

» ನಾಲ್ಕನೇ ಪುಟದಲ್ಲಿ





### ಕಾಡಾನೆ ಸೆರೆಗೆ ಅರಣ್ಯ ಸಚಿವರ ಸೂಚನೆ

ಹಾಸನ: ಕಾಡಾನೆ ದಾಳಿಯಿಂದ ಶೋಭ ಅವರು ಮೃತಪಟ್ಟಿರುವುದಕ್ಕೆ ಶೋಕ ವ್ಯಕ್ತಪಡಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಕೂಡಲೇ ಕಾಡಾನೆಯನ್ನು ಮರಳಿ ಕಾಡಿಗೆ ಹಿಮ್ಮೆಟ್ಟಿಸಲು ಅಥವಾ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ವನ್ಯಜೀವಿ ವಿಭಾಗದ ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಆಕಸ್ಮಿಕವಾಗಿ ವನ್ಯಜೀವಿ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ ಆಸರೆಯಾಗಲು ನಿಯಮಾನುಸಾರ ಪರಿಹಾರ ನೀಡಲಾಗುವುದು. ವನ್ಯಜೀವಿಗಳಿಂದ ಮಾನವ ಜೀವ ಹಾನಿ ಸಂಭವಿಸದಂತೆ ಎಲ್ಲಾ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಹಾಗು ಆನೆಗಳ ಸಂಚಾರದ ಬಗ್ಗೆ ಸ್ಥಳೀಯರಿಗೆ ಎಚ್ಚರಿಕೆ ಸಂದೇಶ ರವಾನಿಸಲು ಮತ್ತು ಆನೆ ಕಾರ್ಯಪಡೆ ಸಿಬ್ಬಂದಿಯನ್ನು ನಿಯೋಜಿಸಲು ತಿಳಿಸಿದ್ದಾರೆ.

# ಮಲೆನಾಡು ಭಾಗದಲ್ಲಿ ಜೋರು ಮಳೆ

## ಕಾಫಿ ಬೆಳೆಗಾರರು, ಭತ್ತದ ಒಕ್ಕಣೆಗೆ ರೈತರು ಕಂಗಾಲು





• ಪ್ರಜೋದಯ ವರದಿ

**ಹಾಸನ:** ನಗರ ಸೇರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಂಗಳವಾರ ಸಂಜೆ ಮಳೆ ಸುರಿದ ಪರಿಣಾಮ ಕಾಫಿ ಬೆಳೆಗಾರರು, ಭತ್ತ ಕೊಯ್ಲು ಮಾಡಿರುವ ರೈತರು ಪರಿತಪಿಸುವಂತಾಯಿತು.

ಸಕಲೇಶಪುರ ತಾಲ್ಲೂಕಿನ ಹಲವೆಡೆ ಗುಡುಗು, ಮಿಂಚು ಸಹಿತ ಜೋರಾಗಿಯೇ ಮಳೆ ಸುರಿದಿದ್ದರಿಂದ ಕಣದಲ್ಲಿ ಒಣ ಹಾಕಿದ್ದ ಕಾಫಿಯನ್ನು ರಾಶಿ ಮಾಡಲು ಪರದಾಡಿದರು. ಪಟ್ಟಣ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾದರೆ, ಕುದರಂಗಿ, ಶಾಂತಪುರ, ಸುಳ್ಳಕ್ಕಿ ಸೇರಿ ವಿವಿಧೆಡೆ ಮಳೆಯ ಅಬ್ಬರ ಜೋರಾಗಿಯೇ ಇತ್ತು. ಮಲೆನಾಡು ಭಾಗದಲ್ಲಿ ಕಳೆದ ಮೂರು ದಿನಗಳಿಂದ ಮೋಡಕವಿದ ವಾತಾವರಣವಿದ್ದು, ಮಂಗಳವಾರ ಸಂಜೆ ಏಕಾಏಕಿ ಮಳೆ ಸುರಿದಿದ್ದರಿಂದ ಭತ್ತದ ಹುಲ್ಲು, ಕಣದಲ್ಲಿದ್ದ ಕಾಫಿ ಮಳೆಯಲ್ಲಿ ನೆನೆಯಿತು.

ನಗರದಲ್ಲಿ ಮಧ್ಯಾಹ್ನದವರೆಗೆ ಬಿಸಿಲಿನ ವಾತಾವರಣ ಕಂಡು ಬಂತು. ಆದರೆ, ಏಕಾಏಕಿ ಸಂಜೆ 5.30ರ ಸುಮಾರಿಗೆ ತುಂತುರು ಮಳೆ ಸುರಿಯಿತು. ಆಲೂರು, ಬೇಲೂರು ತಾಲ್ಲೂಕು ಭಾಗದಲ್ಲಿ ಮೋಡಕವಿದ ವಾತಾವರಣ, ಮಳೆ ಮುನ್ಸೂಚನೆ ಇರುವುದರಿಂದ ಕೊಯ್ಲು ಮಾಡಿರುವ ಕಾಫಿ ಒಣಗಿಸಲು ಬೆಳೆಗಾರರು ಪರಡಾಡುವಂತಾಗಿದೆ. ಮಳೆಯಿಂದ ಭತ್ತದ ಒಕ್ಕಣೆಗೆ ಅಡ್ಡಿಯಾಗಿದ್ದು, ರೈತರನ್ನು ಚಿಂತೆಗೀಡು ಮಾಡಿದೆ.

# ಯುಗ ಯೋಗಿ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಾರಾಧನೆ

• ಪ್ರಜೋದಯ ವರದಿ

**ಹಾಸನ:** ಭೈರವೈಕ್ಯ, ಯುಗಯೋಗಿ ಶ್ರೀ ಡಾ. ಬಾಲಗಂಗಾಧರನಾಥ ಸ್ವಾಮೀಜಿಯವರ 13ನೇ ವರ್ಷದ ಪುಣ್ಯಾರಾಧನಾ ಕಾರ್ಯ ಕ್ರಮವು ನಗರದ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಮಂಗಳವಾರ ಶ್ರದ್ಧಾಭಕ್ತಿಯಿಂದ ಅರ್ಥಪೂರ್ಣವಾಗಿ ನೆರವೇರಿತು.

ಶ್ರೀ ಆದಿಚುಂಚನಗಿರಿ ಸಂಸ್ಥಾನ ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಪ್ರಾತಃಕಾಲ 6 ಗಂಟೆಗೆ ಮಠದ ಆವರಣದಲ್ಲಿರುವ ಮಹಾಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಗೋ ಪೂಜೆ ನೆರವೇರಿಸುವ ಮೂಲಕ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ 13ನೇ ಪುಣ್ಯಾರಾಧನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಪುತ್ಥಳಿಯನ್ನು ಶ್ರೀ ಮಠದ ಆವರಣದಿಂದ ಎಂ.ಜಿ. ರಸ್ತೆಯ ಮೂಲಕ ಮುತ್ತಿನ ಪಲ್ಲಕ್ಕಿಯಲ್ಲಿ ಉತ್ಸವ ಆದಿಚುಂಚನಗಿರಿ ಸಮುದಾಯ ಭವನದವರೆಗೂ ನೂರಾರು ಸದ್ಭಕ್ತರೊಡನೆ ಮೆರವಣಿಗೆಯಲ್ಲಿ ತರಲಾಯಿತು.

ಪುಣ್ಯಾರಾಧನಾ ವಿಧಿ ವಿಧಾನಗಳು ಶ್ರೀ ಶಂಭುನಾಥ ಸ್ವಾಮೀಜಿ ನೇತೃತ್ವದಲ್ಲಿ ನೆರವೇರಿದವು. ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಪುತ್ಥಳಿ ಎದುರು ನೈವೇದ್ಯ ಇಟ್ಟು ಅಷ್ಟಾವಧಾನ ಸೇವೆ ಸಲ್ಲಿಸಿ, ಮಹಾಮಂಗಳಾರತಿ ನೆರವೇರಿಸಲಾಯಿತು.

ಈ ವೇಳೆ ವಿವಿಧ ಮಠಗಳ ಮಠಾಧೀಶರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಮುಖಂಡರು, ಮಠದ ಸದ್ಭಕ್ತರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಶ್ರೀಗಳ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ, ಶಂಭುನಾಥ ಶ್ರೀಯವರ ಆಶೀರ್ವಾದ ಪಡೆದರು. ನಂತರ ಭಕ್ತರಿಗೆ ಪ್ರಸಾದ ವಿನಿಯೋಗ ನಡೆಸಲಾಯಿತು.

ಶ್ರೀ ಕಾಲಭೈರವೇಶ್ವರ ಭಜನಾ ಮಂಡಳಿ, ಶ್ರೀ ಶಂಕರ ಭಜನಾ ಮಂಡಳಿ, ಶ್ರೀ ಶನೈಶ್ವರಸ್ವಾಮಿ

» ನಾಲ್ಕನೇ ಪುಟದಲ್ಲಿ

### ಭಕ್ತಿ ಭಾವದ ಮುತ್ತಿನ ಪಲ್ಲಕ್ಕಿ ಮೆರವಣಿಗೆ



ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ 13ನೇ ಪುಣ್ಯಾರಾಧನೆ ಅಂಗವಾಗಿ ನಗರದಲ್ಲಿ ಸಂಜೆ ಭಕ್ತಿ ಭಾವದ ಪುತ್ಥಳಿಯ ಮುತ್ತಿನ ಪಲ್ಲಕ್ಕಿ ಉತ್ಸವ ಹಾಗೂ ದಿವ್ಯ ಜ್ಯೋತಿಯೊಂದಿಗೆ ಮೆರವಣಿಗೆ ನಡೆಯಿತು.

ಹೇಮಾವತಿ ಪ್ರತಿಮೆಯಿಂದ ಹೊರಟ ಸ್ವಾಮೀಜಿಗಳು, ಜನಪ್ರತಿನಿಧಿಗಳು ಹಾಗೂ ಭಕ್ತರು ಹಳೆಯ ಬಸ್ ನಿಲ್ದಾಣ ರಸ್ತೆ, ಎನ್.ಆರ್.ವೃತ್ತ, ಜಿಲ್ಲಾಧಿಕಾರಿ ಕಚೇರಿ ಮುಂಭಾಗ, ಶಂಕರಮಠ ರಸ್ತೆ ಮಾರ್ಗವಾಗಿ ಆದಿಚುಂಚನಗಿರಿ ಸಮುದಾಯ ಭವನ ತಲುಪಿತು. ದಾರಿಯುದ್ದಕ್ಕೂ ಶ್ರೀಮಠದ ಭಕ್ತರು ನಾದಸ್ವರಗಳೊಂದಿಗೆ ಹೆಜ್ಜೆ ಹಾಕುತ್ತಾ ಭಕ್ತಿ ಮೆರೆದರು. ಸಂಜೆಯ ಮೆರವಣಿಗೆಗೆ ಮಳೆಯ ಸಿಂಚನ ಮೆರುಗು ನೀಡಿತು. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ಶಿವಪುತ್ರನಾಥ ಸ್ವಾಮೀಜಿ, ಶಾಸಕರಾದ ಸಿ.ಎನ್. ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ಸುಮುಖ ರಘು, ನಾಯಕರಹಳ್ಳಿ ಮಂಜೇಗೌಡ, ಶಿವರಾಮೇಗೌಡ ಇತರರಿದ್ದರು.

# ಲೋಕಾಯುಕ್ತ ಬಲೆಗೆ ಕಿರಿಯ ಇಂಜಿನೀಯರ್

• ಪ್ರಜೋದಯ ವರದಿ

**ಹಾಸನ :** ಲಂಚ ಪಡೆಯುತ್ತಿದ್ದ ವೇಳೆ ಅರಕಲಗೂಡು ತಾಲ್ಲೂಕು ಬಸವಾಪಟ್ಟಣ ವ್ಯಾಪ್ತಿಯ ಸೆಸ್ಕಾಂ ಕಿರಿಯ ಇಂಜಿನೀಯರ್ ಶ್ರೀಧರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಅರಕಲಗೂಡು ತಾಲ್ಲೂಕಿನ ಬೆಟ್ಟಸೋಗೆ ಗ್ರಾಮದ ಬಿ.ಪಿ.ಗಿರೀಶ್ ಎಂಬುವವರು ವಿದ್ಯುತ್ ಟ್ರಾನ್ಸ್ ಫಾರ್ಮರ್ ಬದಲಾವಣೆ ಮಾಡಿಕೊಡುವಂತೆ ಕೇಳಿಕೊಂಡಿದ್ದರು. ಟಿ.ಸಿ ಬದಲಾವಣೆಗೆ ಶ್ರೀಧರ್ 6 ಸಾವಿರ ರೂ. ಬೇಡಿಕೆ ಇಟ್ಟಿದ್ದರು. ಮೊದಲ ಹಂತವಾಗಿ ಜ.9 ರಂದು ಫೋನ್ ಪೇ ಮೂಲಕ 3,500ರೂ. ಪಡೆದುಕೊಂಡಿದ್ದರು. ಬಾಕಿ 2,500 ರೂ. ಹಣವನ್ನು ಪುನಃ ಫೋನ್‌ಪೇ ಮಾಡಿಸಿಕೊಂಡಾಗ, ದಾಳಿ ಮಾಡಿದ ಲೋಕಾಯುಕ್ತ ಅಧಿ ಕಾರಿಗಳು, ಶ್ರೀಧರ್ ಹಾಗು ಮೊಬೈಲ್ ವಶಕ್ಕೆ ಪಡೆದು ಕೊಂಡಿದ್ದಾರೆ.

# ಜಿಲ್ಲೆಯಲ್ಲಿ ಕಾಂಗ್ರೆಸ್ ಆಟ ನಡೆಯಲ್ಲ: ಹೆಚ್.ಡಿ. ರೇವಣ್ಣ

## ಹಾಸನಕ್ಕೆ ಬಿಡುಗಡೆ ಮಾಡಿರುವ ಅನುದಾನದ ಶ್ವೇತಪತ್ರ ಹೊರಡಿಸಲು ಸವಾಲು

• ಪ್ರಜೋದಯ ವರದಿ

**ಆಲೂರು:** ಜಿಲ್ಲೆಯಲ್ಲಿ ಕಾಂಗ್ರೆಸ್‌ನವರ ಆಟ ನಡೆಯುವುದಿಲ್ಲ. ಮೊದಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಕಳೆದ ಎರಡೂವರೆ ವರ್ಷದಲ್ಲಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ ಶ್ವೇತಪತ್ರ ಹೊರಡಿಸಲಿ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸವಾಲು ಹಾಕಿದರು.

ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್.ಮಂಜೇಗೌಡ ಅವರ ಮನೆಯಲ್ಲಿ ಏರ್ಪಡಿಸಲಾಗಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಹಾಗು ಕಳೆದ ಅವಧಿಯಲ್ಲಿ ಬಿಜೆಪಿ ಸರ್ಕಾರವಿದ್ದಾಗ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ನಾವು ಮಾಡಿರುವುದಾಗಿ ಕಾಂಗ್ರೆಸ್ಸಿನವರು ಬಿಂಬಿಸಿಕೊಂಡು ಉದ್ಘಾಟನೆ ಮಾಡಿರುವುದು ಖಂಡನೀಯ ಎಂದರು.



ರಾಜ್ಯ ಕಾಂಗ್ರೆಸ್ ಸರ್ಕಾರವು ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಂಡು ಜಿಲ್ಲೆಯಲ್ಲಿ ಸಮಾವೇಶಗಳನ್ನು ನಡೆಸುವ ಮೂಲಕ ಜೆಡಿಎಸ್ ಪಕ್ಷದ ರಾಜಕೀಯ ಶಕ್ತಿಯನ್ನು ಕುಗ್ಗಿಸಲು ಯತ್ನಿಸುತ್ತಿದೆ. ಆದರೆ, ಜಿಲ್ಲೆಯಲ್ಲಿ

» ನಾಲ್ಕನೇ ಪುಟದಲ್ಲಿ

### ಸವಾಲಿಗೆ ತಕ್ಕ ಉತ್ತರ ನೀಡಲು ಸಿದ್ಧ

ಪಕ್ಷದ ಆದೇಶ ಬಂದರೆ ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿಯೇ ಸ್ಪರ್ಧಿಸಿ ಶಾಸಕ ಶಿವಲಿಂಗೇಗೌಡ ಅವರ ಸವಾಲಿಗೆ ತಕ್ಕ ಉತ್ತರ ನೀಡಲು ಸಿದ್ಧನಿದ್ದೇನೆಂದು ಹೆಚ್.ಡಿ.ರೇವಣ್ಣ ಅವರು ಸ್ಪಷ್ಟಪಡಿಸಿದರು. ಹಾಸನ ಹಾಗು ಸಕಲೇಶಪುರ ಕ್ಷೇತ್ರಗಳಲ್ಲಿ ಕೆಲ ಮೈತ್ರಿ ನಾಯಕರು ಬೇರೆ ರಾಜಕೀಯ ಲೆಕ್ಕಾಚಾರಗಳಲ್ಲಿ ತೊಡಗಿರುವುದು ಗಮನಕ್ಕೆ ಬಂದಿದೆ. ಈ ಕುರಿತು ರಾಜ್ಯ ಮತ್ತು ರಾಷ್ಟ್ರೀಯ ನಾಯಕರು ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆಂದು ಹೇಳಿದರು.

# ಜ.16 ರಂದು ಸಚಿವರ ಜನ ಸ್ಪಂದನಾ ಸಭೆ

• ಪ್ರಜೋದಯ ವರದಿ

**ಸಕಲೇಶಪುರ :** ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಜ.16 ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣೆಬೈರೇಗೌಡ ಅವರ ಉಸ್ತುವಾರಿಯಲ್ಲಿ ಜನಸ್ಪಂದನಾ ಸಭೆ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಕಾರ್ಯಕ್ರಮ ನಡೆಯುವ ಸ್ಥಳವನ್ನು ಪರಿಶೀಲಿಸಿ ಮಾತನಾಡಿದ ಅವರು, ಸಭೆಯಲ್ಲಿ ಶಾಸಕರು, ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದು, ಸಾರ್ವಜನಿಕರು ಕಾರ್ಯ

» ಮೂರನೇ ಪುಟದಲ್ಲಿ

# ಶಾಸಕ ಶಿವಲಿಂಗೇಗೌಡರ ಗರ್ವ ಭಂಗ ಖಚಿತ

## ಅರಸೀಕೆರೆ ಜೆಡಿಎಸ್ ಮುಖಂಡರ ಶಪಥ | ಏಕವಚನದಲ್ಲಿ ವಾಗ್ದಾಳಿ

• ಪ್ರಜೋದಯ ವರದಿ

**ಹಾಸನ:** ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಕುರಿತು ಹಗುರವಾಗಿ ಮಾತನಾಡುತ್ತಿರುವ ಶಾಸಕ ಕೆ.ಎಂ.ಶಿವಲಿಂಗೇಗೌಡರ ಗರ್ವ ಭಂಗ ಮಾಡುತ್ತೇವೆಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಣಾವರ ಅಶೋಕ್ ಅವರು ಸವಾಲೆಸೆದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಏನೂ ಕೆಲಸವಿಲ್ಲದೆ ಅಲೆಯುತ್ತಿದ್ದ ವ್ಯಕ್ತಿಯನ್ನು ಜಿಲ್ಲಾ ಪಂಚಾಯಿತಿ ಸದಸ್ಯನನ್ನಾಗಿ ಮಾಡಿ ರಾಜಕೀಯ ಜೀವನ ಕಲ್ಪಿಸಿದ್ದು ಹೆಚ್.ಡಿ.ದೇವೇಗೌಡರು ಹಾಗು ಹೆಚ್.ಡಿ.ರೇವಣ್ಣ ಎಂಬುದನ್ನು ಮರೆಯಬಾರದು. ಶಿವಲಿಂಗೇಗೌಡ ಅವರು ಶಾಸಕರಾಗಿ ಏನೇ ಕೆಲಸ ಮಾಡಿದ್ದರೂ ಅದು ಜೆಡಿಎಸ್ ಸರ್ಕಾರದ ನೆರವಿನಿಂದ ಹೊರತು ಕಾಂಗ್ರೆಸ್ ಸರ್ಕಾರದಿಂದ ಬಿಡಿಗಾಸು ಅನುದಾನ ತಂದಿಲ್ಲ. ಕಳೆದ ಎರಡೂವರೆ ವರ್ಷದಲ್ಲಿ ಕ್ಷೇತ್ರ ಅಭಿವೃದ್ಧಿಗೆ ಏನು ಮಾಡಿದ್ದಾರೆಂಬುದರ ಬಗ್ಗೆ ಶ್ವೇತ ಪತ್ರ ಹೊರಡಿಸಲಿ ಎಂದು ಸವಾಲೆಸೆದರು.





**ಉಂಡ ಮನೆಗೆ ದ್ರೋಹ**

ಜೆಡಿಎಸ್ ಪಕ್ಷಕ್ಕೆ ಜನರು ಓಟು ಹಾಕುತ್ತಿದ್ದರೇ ಹೊರತು ಶಿವಲಿಂಗೇಗೌಡರ ಮುಖ ನೋಡಿ ಅಲ್ಲ. ಶಿವಲಿಂಗೇಗೌಡರಿಗೆ ಜೆಡಿಎಸ್ ಅನಿವಾರ್ಯ ಹೊರತು ಪಕ್ಷಕ್ಕೆ ಅವರ ಅವಶ್ಯಕತೆ ಇರಲಿಲ್ಲ. ಅಧಿಕಾರದಾಸೆಗೆ ಪಕ್ಷ ತೊರೆದು ಉಂಡ ಮನೆಗೆ

» ಮೂರನೇ ಪುಟದಲ್ಲಿ

## 250 ರೂ.ಗಾಗಿ 300 ರೂ. ಖರ್ಚು | ಹಾಸನದಲ್ಲಿ 120 ರೈತರಿಂದ ನೋಂದಣಿ


# ಮೆಕ್ಕೆಜೋಳ ಖರೀದಿ: ರೈತರಿಗೆ ನೆರವಾಗದ ಪ್ರೋತ್ಸಾಹ ಧನ

• ಪ್ರಜೋದಯ ವರದಿ

**ಹಾಸನ:** ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಮೆಕ್ಕೆಜೋಳಕ್ಕೆ ಪ್ರೋತ್ಸಾಹ ಧನದಡಿ ಖರೀದಿಗೆ ಚಾಲನೆ ನೀಡಲಾಗಿದೆಯಾದರೂ ರೈತರಿಗೆ ವರದಾನಕ್ಕಿಂತ ಮಾರಕವಾಗಿ ಪರಿಣಮಿಸಿದೆ.

ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಪ್ರತಿ ಕ್ವಿಂಟಾಲ್‌ಗೆ 250 ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆಯಾದರೂ ಪ್ರಕ್ರಿಯೆಗಳು ರೈತರನ್ನು ಹೈರಾಣಾಗಿಸುತ್ತಿವೆ. ಹೀಗಾಗಿ ಜಿಲ್ಲೆಯ ಬಹುತೇಕ ರೈತರು ಎಪಿಎಂಸಿ ಸಹವಾಸ ಬೇಡವೆಂದು ವರ್ತಕರಿಗೆ ಜೋಳ ಮಾರಾಟ ಮಾಡಿ ಸುಮ್ಮನಾಗುತ್ತಿದ್ದಾರೆ.

ಕೆಎಂಎಫ್‌ನಿಂದ 10 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಾಲ್‌ಗೆ 2,400 ರೂ.ನಂತೆ ಖರೀದಿಸಲಾಗಿದೆ. ಮಾರಾಟಕ್ಕೆ ಸಿದ್ಧವಾಗಿರುವ ಮೆಕ್ಕೆಜೋಳ ಸಾಕಷ್ಟು ಪ್ರಮಾಣದಲ್ಲಿರುವುದರಿಂದ ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಖರೀದಿಸಬೇಕೆಂಬ ಆಗ್ರಹ ಕೇಳಿ ಬಂದಿತ್ತು. ಅದಕ್ಕೆ ವಿಧಿಸುವ ಮಾನದಂಡಗಳು ತಲೆ ಕೆಡಿಸುತ್ತಿವೆ.



> ಕೆಎಂಎಫ್‌ಗೆ ಮೆಕ್ಕೆಜೋಳ ಮಾರಾಟ ಮಾಡಿದ ರೈತರು ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಮಾರಾಟ ಮಾಡಬಾರದು. ಕೆಎಂಎಫ್‌ನಿಂದ ಹಣ ಪಾವತಿಯಾಗದ ಹಿನ್ನಲೆಯಲ್ಲಿ ಅಂತಹವರು ಇಲ್ಲಿಯೂ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಎರಡೂ ಕಡೆ ಮಾರಾಟ ಮಾಡುವವರಿಗೆ ಪ್ರೋತ್ಸಾಹ ಧನ ಸಿಗುವುದಿಲ್ಲ.
> 
> -ಮಧು, ಎಪಿಎಂಸಿ ಕಾರ್ಯದರ್ಶಿ ಹಾಸನ.

### 3,519 ಕ್ವಿಂಟಾಲ್ ನೋಂದಣಿ

ಜ.12 ರಿಂದ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಹಾಸನದ ಎಪಿಎಂಸಿಯಲ್ಲಿ 120 ರೈತರು 3,519 ಕ್ವಿಂಟಾಲ್ ಜೋಳ ನೋಂದಣಿ ಮಾಡಿದ್ದಾರೆ. ಸಕಲೇಶಪುರ ಹೊರತುಪಡಿಸಿ ಉಳಿದ ಎಲ್ಲಾ ಎಪಿಎಂಸಿಗಳಲ್ಲಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಆಲೂರಿನಲ್ಲಿ ಎಪಿಎಂಸಿ ಇಲ್ಲದಿರುವುದರಿಂದ ಅಲ್ಲಿನ ರೈತರು ಹಾಸನಕ್ಕೆ ಬರಬೇಕು. ಹಾಸನ ಸೇರಿ 13 ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ಜಾರಿಯ ಲ್ಲಿದ್ದು, ಒಂದು ತಿಂಗಳವರೆಗೆ ಇರಲಿದೆ. ಜಿಲ್ಲೆಗೆ 2.50 ಲಕ್ಷ ಕ್ವಿಂಟಾಲ್ ಗುರಿ ನಿಗದಿಪಡಿಸಲಾಗಿದೆ.

ರೈತರು ತಮ್ಮ ಆಧಾರ್ ಅಥವಾ ಫ್ರೂಟ್ಸ್ ಐಡಿ ಜೊತೆಗೆ ಹತ್ತಿರದ ಎಪಿಎಂಸಿಗಳಲ್ಲಿ ನೋಂದಣಿ ಮಾಡಿಸಬೇಕು. ಒಂದು ಪಹಣಿಯಲ್ಲಿ ಪ್ರತಿ ಎಕರೆಗೆ ಕನಿಷ್ಟ 12 ರಿಂದ ಗರಿಷ್ಟ 50 ಕ್ವಿಂಟಾಲ್ ವರೆಗೆ ಮಾರಾಟ ಮಾಡಬಹುದು. 50 ಕ್ವಿಂಟಾಲ್‌ಗೆ ನೊಂದಾಯಿಸಬೇಕಾದರೆ ಪಹಣಿಯಲ್ಲಿ 4 ಎಕರೆ ಇರಬೇಕು. ಮೆಕ್ಕೆ ಜೋಳವನ್ನು ತುಂಬಿದ ವಾಹನದ ಜೊತೆ ರೈತನೇ ಎಪಿಎಂಸಿಗೆ ತೆರಳಿ ಗೇಟ್‌ನಲ್ಲಿ ಜಿಪಿಎಸ್ ಫೋಟೋ ತೆಗೆಸಬೇಕು. ನಂತರ ವರ್ತಕರಿಗೆ ಜೋಳ ಮಾರಾಟ ಮಾಡಿ ಅವರಿಂದ ಮಾರುಕಟ್ಟೆ ಬೆಲೆ ಪಡೆದು ಉಳಿದ 250 ರೂ.ಗಾಗಿ ಆಧಾರ್ ಕಾರ್ಡ್, ವರ್ತಕರು ನೀಡಿದ ಬಿಲ್, ಫ್ರೂಟ್ಸ್ ಐಡಿ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆಯನ್ನು ಎಪಿಎಂಸಿಗೆ ಸಲ್ಲಿಸಬೇಕು.

**ಸಮಸ್ಯೆಗಳ ಮಹಾಪೂರ**

ಪ್ರತಿ ರೈತನಿಗೆ ಒಂದು ಎಕರೆಗೆ 12 ಕ್ವಿಂಟಾಲ್ ಮಾತ್ರ ನಿಗದಿ ಮಾಡಲಾಗಿದೆ. ಹೆಚ್ಚುವರಿ ಜೋಳ ಇದ್ದರೆ ಅದನ್ನುವರ್ತಕರು ಖರೀದಿಸುತ್ತಾರೆ. ಆದರೆ, ಅದಕ್ಕೆ ಪ್ರೋತ್ಸಾಹ ಧನ ಸಿಗುವುದಿಲ್ಲ. ರೈತ ಒಕ್ಕಣೆ ಮಾಡಿದ ಜೋಳವನ್ನು ಚೀಲಕ್ಕೆ ತುಂಬಿ ಮಾರುಕಟ್ಟೆಗೆ ತಲುಪಿಸುವ ವೇಳೆಗೆ ಕ್ವಿಂಟಾಲ್‌ಗೆ 200 ರಿಂದ 300 ರೂ. ಖರ್ಚಾ

» ಮೂರನೇ ಪುಟದಲ್ಲಿ




# ಗಾರ್ಡನ್ ಸಿಟಿಯಲ್ಲ, ಸಿಲಿಕಾನ್ ಸಿಟಿಯೂ ಅಲ್ಲ.. ಕ್ರೈಂ ಸಿಟಿ!

» **ಸ್ಲಮ್‌ನಿಂದ ಎದ್ದು ಬಂದಂತೆ ಕಾಣುವ, ರೌಡಿಸಂ ಸಿನಿಮಾದ ಪುಡಿ ವಿಲನ್‌ನಂತಿರುವ ತಮಿಳನಂತೆ ಕಾಣುತ್ತಿದ್ದಾನೆ. ಮಧ್ಯಾಹ್ನದ ಬಿಸಿಲಿಗೆ ಬೆವರಿದ್ದಾನೆ, ಕೆರಳಿದ್ದಾನೆ. ಟ್ರಾಫಿಕ್ ಯಾಕೆ ಜಾಮ್ ಆಗಿದೆ ಎಂದು ನೋಡುವಷ್ಟರಲ್ಲಿ ಸುಮಾರು ಹತ್ತು ಕೆಜಿ ತೂಕದ ದಪ್ಪ ಕಲ್ಲನ್ನೆತ್ತಿ ಒಂದು ಕಾರಿನ ವಿಂಡ್ ಶೀಲ್ಡ್ ಮೇಲೆ ಕುಕ್ಕುತ್ತಾನೆ.**

ಪದಸಾಗರ

ಬೆಂಗಳೂರಿನ ಕಾನೂನು ಮತ್ತು ಸುವ್ಯವಸ್ಥೆ ಅದೆಷ್ಟು ಕುಲಗೆಟ್ಟಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ಕೊಡಬಹುದು. ಆದರೆ ಇದನ್ನು ಸರಿಪಡಿಸುವ ವಿಷಯದಲ್ಲಿ ಯಾರನ್ನು ಪ್ರಶ್ನಿಸಬೇಕು? ರಕ್ಷಣೆಗೆ ಯಾರಲ್ಲಿ ಮೊರೆ ಹೋಗಬೇಕು? ಈ ಪರಿಸ್ಥಿತಿಯಲ್ಲಿ ಮನೆ ಹೊಸ್ತಿಲಿನಿಂದ ಹೊರಗೆ ಕಾಲಿಟ್ಟವರು ಸುರಕ್ಷಿತವಾಗಿ ಮನೆಗೆ ವಾಪಸ್ ಆಗುತ್ತಾರೆ ಎಂಬುದಕ್ಕೆ ಏನು ಖಾತರಿ?

ಮೂರು ಪ್ರತ್ಯೇಕ ಘಟನೆಗಳ ಬಗ್ಗೆ ಮೊದಲು ಮಾತನಾಡ್ತೀನಿ. ಈ ಮೂರೂ ಬೆಂಗಳೂರಿನ ನಡೆದಿರುವ ಘಟನೆಗಳು.

**ಘಟನೆ 1:** ಮಧ್ಯಾಹ್ನ ಮೂರು ಗಂಟೆಯ ಸಮಯ. ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಕ್ಕೆ ಹೋಗುವ ಮಾರ್ಗ. ಸದಾ ವಾಹನಗಳಿಂದ ಮತ್ತು ಜನಸಂದಣಿಯಿಂದ ತುಂಬಿರುವ ರಸ್ತೆಯದು. ಮಂತ್ರಿ ಮಾಲ್‌ಗೆ ಕೇವಲ 150-200 ಮೀಟರ್ ದೂರವಷ್ಟೆ. ಶೇಷಾದ್ರಿಪುರಂ ಪೊಲೀಸ್ ಠಾಣೆಗೆ ಅರ್ಧ ಕಿಲೋಮೀಟರ್ ದೂರವಿದ್ದರೆ, ಮಲ್ಲೇಶ್ವರ ಪೊಲೀಸ್ ಠಾಣೆಗೆ ಒಂದೂವರೆ ಕಿಲೋಮೀಟರ್ ದೂರ. ಡಬಲ್ ರೋಡ್‌ನ ಒಂದು ರಸ್ತೆಯಲ್ಲಿ ದಿಢೀರ್ ಟ್ರಾಫಿಕ್ ಜಾಮ್ ಆಗುತ್ತದೆ. ರಸ್ತೆಯ ಇಕ್ಕೆಲದಲ್ಲೂ ರಾಶಿ ರಾಶಿ ಜನರು ಭಯಭೀತರಾಗಿ ನೋಡ್ತಿದ್ದಾರೆ. ನೋಡನೋಡುತ್ತಿದ್ದಂತೆ 18-20ರ ವಯಸ್ಸಿನ ಯುವಕನೊಬ್ಬ ಕಾಣಿಸಿ ಕೊಳ್ಳುತ್ತಾನೆ.

ಸ್ಲಮ್‌ನಿಂದ ಎದ್ದು ಬಂದಂತೆ ಕಾಣುವ, ರೌಡಿಸಂ ಸಿನಿಮಾದ ಪುಡಿ ವಿಲನ್‌ನಂತಿರುವ ತಮಿಳನಂತೆ ಕಾಣುತ್ತಿದ್ದಾನೆ. ಮಧ್ಯಾಹ್ನದ ಬಿಸಿಲಿಗೆ ಬೆವರಿದ್ದಾನೆ, ಕೆರಳಿದ್ದಾನೆ. ಟ್ರಾಫಿಕ್ ಯಾಕೆ ಜಾಮ್ ಆಗಿದೆ ಎಂದು

ನೋಡುವಷ್ಟರಲ್ಲಿ ಸುಮಾರು ಹತ್ತು ಕೆಜಿ ತೂಕದ ದಪ್ಪ ಕಲ್ಲನ್ನೆತ್ತಿ ಒಂದು ಕಾರಿನ ವಿಂಡ್ ಶೀಲ್ಡ್ ಮೇಲೆ ಕುಕ್ಕುತ್ತಾನೆ.

ಇಡೀ ನೂರು ಮೀಟರ್ ಸುತ್ತಕ್ಕೂ ಬ್ಲಾಸ್ಟ್ ಆದಂಥ ಸೌಂಡ್ ಕೇಳುತ್ತದೆ. ಜನರೆಲ್ಲ ನೋಡುತ್ತಿದ್ದಾರೆ. ಯಾರೊಬ್ಬರೂ ತಡೆಯೋಕಾಗಲೀ ವಿರೋಧಿಸುವುದಕ್ಕಾಗಲೀ ಹೋಗುತ್ತಿಲ್ಲ. ಶೂಟಿಂಗ್ ಇರಬಹುದಾ ಎಂದು ಸುತ್ತ ನೋಡಿದರೆ ಯಾವ ಕ್ಯಾಮೆರಾವೂ ಇಲ್ಲ.

ಸಿನಿಮಾ ತಂಡವೂ ಅಲ್ಲಿಲ್ಲ. ಮರುಕ್ಷಣವೇ ಆ ಕಲ್ಲನ್ನೆತ್ತಿ ಮತ್ತೆರಡು ಹೆಜ್ಜೆ ಬಂದು, ಹಿಂದಿರುವ ಇನ್ನೊಂದು ಕಾರಿನ ಮುಂಬದಿ ಗಾಜನ್ನು ಅದೇ ರೀತಿ ಪುಡಿಗಟ್ಟುತ್ತಾನೆ. ಏನು ನಡೀತಾ ಇದೆ ಅಂತ ಯೋಚಿಸಲೂ ಪುರುಸೊತ್ತು ಕೊಡದಂತೆ, ಒಂದಾದ ಮೇಲೊಂದು ಕಾರ್ ಬಳಿ ಬಂದು ಕಾರೊಳಗೆ ಇರುವವರನ್ನು ಕೆಕ್ಕರಿಸಿ ಅವರ ಕಾರ್‌ಗಳ ಗಾಜನ್ನು ಒಡೆದು ರಾಜಾರೋಷದಿಂದ ಫಿಲ್ಮಿ ಸ್ಟೈಲಿನಲ್ಲಿ ನಡೆದು ಹೋಗಿ ಬಿಡುತ್ತಾನೆ.

ಕಾರ್ ಒಳಗಿದ್ದವರು ಯಾವ ಧೈರ್ಯ ಇಟ್ಟುಕೊಂಡು ಆತನನ್ನು ತಡೆಯಲು ಹೋದಾರು? ಕಾರ್ ಮೇಲೆ ಕಲ್ಲು ಎತ್ತಿ ಚಚ್ಚುವ ಆತ, ವಿರೋಧಿಸಲು ಹೊರ ಬಂದರೆ ತಲೆ ಮೇಲೆ ಕತ್ತಿ ಹಾಕೋದಿಲ್ಲ ಅಂತ ಏನು ಗ್ಯಾರಂಟಿ? ಒಂದು ವೇಳೆ ಕಾರಲ್ಲಲ್ಲದೆ ಬೈಕಲ್ಲಿದ್ದವರ ಮೇಲೆ ಆತ ದಾಳಿ ಮಾಡಿದ್ದಿದ್ದರೆ ಅಂದು ಕನಿಷ್ಠ ಐದು ಜೀವಗಳು ಸ್ಥಳದಲ್ಲೇ ಹೋಗುತ್ತಿದ್ದವೇನೋ!

ಕೆಲವರು ಜೀವ ಉಳಿದ ನಿಟ್ಟುಸಿರಲ್ಲಿ ಅಲ್ಲಿಂದ ಮೊದಲು ಕಾರ್ ಚಲಾಯಿಸಿಕೊಂಡು ಹೋದರೆ, ಕೆಲವರು ಪೊಲೀಸ್ ಠಾಣೆಗೆ ಹೋದರು. ಆದರೆ ಪೊಲೀಸ್ ಠಾಣೆಯಲ್ಲಿ ಸಿಕ್ಕಿದ್ದು ನಿರಾಶಾದಾಯಕ ಪ್ರತಿಕ್ರಿಯೆ. ಜೀವ ಉಳಿದಿದೆಯಲ್ಲ.


ಹೋಗ್ರೀ ಇನ್ಶೂರೆ ಕ್ಲೈಮ್ ಮಾಡ್ಕೊಳ್ಳಿ ಎಂಬ ಉಡಾಫೆಯ ಉತ್ತರ. ಅಷ್ಟು ಮಂದಿ ರಸ್ತೆಯಲ್ಲಿ ಶೂಟಿಂಗ್ ನೋಡಿದಂತೆ ನೋಡ್ತಾ ಇದ್ದರೂ ಸಹಾಯಕ್ಕೆ ಧಾವಿಸದೇ ಇದ್ದದ್ದಕ್ಕೆ ಕಾರಣ ಏನು? ಪೊಲೀಸರ ನಿರ್ಲಕ್ಷ್ಯದ ಪ್ರತಿಕ್ರಿಯೆಗೆ ಕಾರಣ ಏನು? ಸ್ಥಳೀಯವಾಗಿ ವಿಚಾರಿಸಿದಾಗ ಗೊತ್ತಾದದ್ದೇನಂದರೆ ಆ ಹುಡುಗರು ಗಾಂಜಾ ಮತ್ತು ಡ್ರಗ್ ಮೇಲೆ ಬದುಕುತ್ತಿರುವವರು.

ಸ್ಥಳೀಯರಾಗಲೀ ಜನಸಾಮಾನ್ಯರಾಗಲೀ ಅವರ ವಿರುದ್ಧ ಹೋಗಲು ಸಾಧ್ಯವೇ ಇಲ್ಲ. ಪೊಲೀಸರೇ ಇಂಥವರನ್ನು ಬೆಳೆಸಿಟ್ಟುಕೊಳ್ಳುತ್ತಿದ್ದಾರೆ. ಗಾಂಜಾ ವ್ಯವಹಾರದ ಹಿಂದೆ ಅವರಿದ್ದಾರೆ. ಆಗೊಮ್ಮೆ ಈಗೊಮ್ಮೆ ಹಿಡಿದಂತೆ ಮಾಡುವುದು, ಬಿಟ್ಟು ಕಳಿಸುವುದು, ಒಂದು ಕಡೆ ಸೀಜ್ ಮಾಡೋ ಗಾಂಜಾ, ಇನ್ನೊಂದು ಕಡೆ ತಂದು ಮಾರುವುದು ಇಂಥ ಹಲವು ದಂಧೆಗಳನ್ನು ಪೊಲೀಸರೇ ಮಾಡುತ್ತಿದ್ದಾರೆ. ರಾಜಕಾರಣಿಗಳಿಗೂ ಪೊಲೀಸರಿಗೂ ಗಾಂಜಾ ಗಿರಾಕಿಗಳಿಗೂ ನಂಟಿದೆ. ಹೀಗಾಗಿ ಅವರನ್ನು ತಡೆಯೋವ್ರೇ ಇಲ್ಲದಂತಾಗಿದೆ.

**ಘಟನೆ 2:** ಸಂಜೆ ಏಳು ಗಂಟೆ. ಮೆಜೆಸ್ಟಿಕ್ ಬಸ್ ಸ್ಟ್ಯಾಂಡ್‌ನಲ್ಲಿ ಬಸ್ ಹಿಡಿಯಲೆಂದು ಎಪ್ಪತ್ತೆಂಟರ ವೃದ್ಧರೊಬ್ಬರು ನಡೆದು ಹೋಗುತ್ತಿದ್ದಾರೆ. ವ್ಯಕ್ತಿಯೊಬ್ಬ ಬಂದು ವೃದ್ಧರ ಬಳಿ ನೂರು ರುಪಾಯಿ ಕೇಳುತ್ತಾನೆ. ಕೊಡುವುದಿಲ್ಲ ಎಂದಾಗ ನಿಮ್ಮನ್ನು ಆಟೋದಲ್ಲಿ ಮನೆ ತಲುಪಿಸುತ್ತೇನೆ, ನೂರು ರುಪಾಯಿ ಕೊಡಿ ಎಂದು ಆಫರ್ ಕೊಡುತ್ತಾನೆ.

ಅವನನ್ನು ನೋಡಿದರೆ ಒಳ್ಳೆಯ ವ್ಯಕ್ತಿ ಅನಿಸುವ ಯಾವ ಕುರುಹೂ ಕಾಣುವುದಿಲ್ಲ. ತಪ್ಪಿಸಿ ಕೊಂಡು ಹೋಗ್ತಾ ಇದ್ದರೆ ಹಿಂದೆ ಬೀಳುತ್ತಾನೆ. ಲಕ್ಷಾಂತರ ಜನರಿರುವ, ಹೆಜ್ಜೆ ಹೆಜ್ಜೆಗೂ ಪೊಲೀಸ್ ಇರುವ ಮೆಜೆಸ್ಟಿಕ್‌ನಲ್ಲಿ ವೃದ್ಧರನ್ನು ಬೆದರಿಸಿ ನಿಲ್ಲಿಸಿಕೊಳ್ಳುತ್ತಾನೆ.

ವೃದ್ಧರು ಸಹಾಯಕ್ಕಾಗಿ ಕೂಗುತ್ತಾರೆ. ಮೆಜೆಸ್ಟಿಕ್‌ನ ಸದ್ದಿನ ನಡುವೆ ಅವರ ಕೂಗಿಗೆ ಯಾರೂ ಕಿವಿಗೊಡುವುದಿಲ್ಲ. ಏಕಾಏಕಿ ಆಟೋವೊಂದು ಬರುತ್ತದೆ. ಆಟೋ ಡ್ರೈವರ್ ಮತ್ತು ಈ ಅಪರಿಚಿತ ಇಬ್ಬರೂ ಸೇರಿ ವೃದ್ಧರನ್ನು ಎಳೆದುಕೊಂಡು ಆಟೋದಲ್ಲಿ ತುಂಬುತ್ತಾರೆ.



ಶರವೇಗದಲ್ಲಿ ಆಟೋ ಚಲಿಸಲಾರಂಭಿಸುತ್ತದೆ. ಕೂಗಲೂ ಆಗದಂತೆ, ತಪ್ಪಿಸಿಕೊಳ್ಳಲೂ ಸಾಧ್ಯವಾಗದಂತೆ ಹಿಡಿದುಕೊಂಡು ಮೆಜೆಸ್ಟಿಕ್ ದಾಟುತ್ತಾರೆ. ವೃದ್ಧರ ಕೈಲಿದ್ದ ಹಣ, ಮೊಬೈಲ್ ಎಲ್ಲವನ್ನೂ ಕಿತ್ತುಕೊಂಡು ದೈಹಿಕವಾಗಿ ಹಲ್ಲೆ ನಡೆಸುತ್ತಾರೆ. ಯಾವುದೋ ಒಂದು ಕ್ಷಣದಲ್ಲಿ ಜೀವ ಹೋದರೂ ಸರಿಯೆಂದು ವೃದ್ಧರು ತಮ್ಮೆಲ್ಲ ಶಕ್ತಿ ಬಳಸಿ ಆಟೋದಿಂದ ಜಿಗಿದೇ ಬಿಡುತ್ತಾರೆ.

ಜಿಗಿದ ವೇಗಕ್ಕೆ ಮೈಕೈ ಗಾಯಗಳಾಗುತ್ತವೆ. ಆಟೋ ನಂಬರ್ ನೋಡಲು ಸಾಧ್ಯವಾಗುವುದಿಲ್ಲ. ಆಟೋ ಕ್ಷಣಾರ್ಧದಲ್ಲಿ ಮಾಯವಾಗುತ್ತದೆ. ಮೊಬೈಲ್ ಮತ್ತು ಹಣದೊಂದಿಗೆ.

**ಘಟನೆ 3:** ಕುಕ್ಕೆ ಸುಬ್ರಹ್ಮಣ್ಯದಿಂದ ನಡುರಾತ್ರಿ ಮೂರರ ಹೊತ್ತಿಗೆ ಕುಟುಂಬವೊಂದು ಬಂದು ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಇಳಿಯುತ್ತದೆ. ಆಟೋ ಚಾಲಕರು ಎಂದಿನಂತೆಯೇ ಬಂದು ಕುಟುಂಬವನ್ನು ಮುತ್ತುತ್ತಾರೆ. ಓಲಾ, ಊಬರ್ ಬುಕ್ ಮಾಡಲೂ ಬಿಡದಂತೆ ಕಾಡುತ್ತಾರೆ. ಅವರಲ್ಲೊಬ್ಬ ಓಲಾದಲ್ಲೂ ಡಬಲ್ ಮೀಟರ್‌ನಷ್ಟೇ ಆಗುತ್ತದೆ. ಡಬಲ್ ಕೊಡಿ ಸಾಕು ಎಂದು ಹೇಳುತ್ತಾನೆ. ಆಟೋದಲ್ಲಿ ಓಡಾಡಿ ಅರಿವಿರುವ ಕುಟುಂಬದ ಯಜಮಾನನಿಗೆ ಮೆಜೆಸ್ಟಿಕ್‌ನಿಂದ ತನ್ನ ಮನೆಗೆ ಎಷ್ಟಾಗಬಹುದೆಂಬ ಅಂದಾಜಿರುತ್ತದೆ. ಸಾಮಾನ್ಯವಾಗಿ ಮೆಜೆಸ್ಟಿಕ್‌ನಿಂದ ಇವರಿರುವ ಜಾಗಕ್ಕೆ 175 ರುಪಾಯಿ ಆಗುತ್ತಿತ್ತು. ಹೀಗಾಗಿ ಡಬಲ್ ಅಂದರೂ 400 ರುಪಾಯಿ ಕೊಡಲು ಆತ ಮಾನಸಿಕವಾಗಿ ಸಿದ್ಧನಾಗಿದ್ದ. ಆದರೆ ಮೀಟರ್ ತೋರಿಸಿದ್ದು ಬರೋಬ್ಬರಿ 333 ರುಪಾಯಿ. ಚಾಲಕ 670 ರುಪಾಯಿ ಡಿಮ್ಯಾಂಡ್ ಮಾಡಲಾರಂಭಿಸುತ್ತಾನೆ.

ಪ್ರಶ್ನಿಸಿದರೆ ತಿರುಗಿ ಬೀಳಲಾರಂಭಿಸಿದ ಅವನ ವರ್ತನೆಗೆ ಹೆದರಿ, ಹೆಂಡತಿ ಮಕ್ಕಳೆದುರು ಈ ನಡುರಾತ್ರಿಯಲ್ಲಿ ಜಗಳ ಬೇಡವೆಂದು ನಾಲ್ಕು ಪಟ್ಟು ಹಣ ಕೊಡಲು ಒಪ್ಪುತ್ತಾನೆ.

ಡಿಜಿಟಲ್ ಪೇಮೆಂಟ್‌ಗೆ ಒಪ್ಪದೇ ನಗದು ಹಣಕ್ಕೆ ಒತ್ತಡ ಹೇರುತ್ತಾನೆ ಆಟೋ ಚಾಲಕ. ಹಣ ತೆಗೆದು ಎಣಿಸಿಕೊಡಲು ಟಾರ್ಚ್‌ಲೈಟ್ ಆನ್ ಮಾಡಿದರೆ, ಆಟೋದ ಗ್ಯಾಸ್ ಬರ್ಸ್ಟ್ ಆಗುತ್ತದೆ ಎಂದು ಗದರಿ ಟಾರ್ಚ್ ಆಫ್ ಮಾಡಿಸುತ್ತಾನೆ.



ಹೇಳಿದಷ್ಟು ಹಣ ಕೊಟ್ಟ ನಂತರವೂ ಅವನ ಸುಲಿಗೆ ನಿಲ್ಲುವುದಿಲ್ಲ. ನೀನು ಕೊಟ್ಟದ್ದು ಇನ್ನೂರೇ ರುಪಾಯಿ ಎಂದು ಸುಳ್ಳು ಹೇಳಿ ಬೆದರಿಸುತ್ತಾನೆ. ಆಟೋ ನಂಬರ್ ನೋಟ್ ಮಾಡಿಕೊಳ್ಳಲು ಹೋದರೆ ಅವರೆದುರು ಅಶ್ಲೀಲವಾಗಿ ಕುಣಿದು, ವಿಚಿತ್ರವಾಗಿ ವರ್ತಿಸಿ ಭಯ ಮೂಡಿಸುತ್ತಾನೆ. ನಿರ್ಜನ ರಸ್ತೆಯಲ್ಲಿ ನಡುರಾತ್ರಿಯಲ್ಲಿ ಜೀವಕ್ಕೇನಾದರೂ ಅಪಾಯ ಉಂಟು ಮಾಡಿದರೆ ಎಂದು ಹೆದರಿ ಅವನು ಕೇಳಿದಷ್ಟು ಹಣ ಕೊಟ್ಟು ಕುಟುಂಬ ಪ್ರಾಣ ಕೈಲಿ ಹಿಡಿದುಕೊಂಡು ಮನೆ ಸೇರಿಕೊಳ್ಳುತ್ತದೆ.

ಈ ಮೂರು ಘಟನೆಗಳು ನನ್ನ ಸುತ್ತ ನಡೆದಿರುವ ಘಟನೆಗಳಾದ್ದರಿಂದ ಉದಾಹರಣೆಯಾಗಿ ತೆಗೆದುಕೊಂಡಿದ್ದೇನೆ. ಬೆಂಗಳೂರಿನ ಲಾ ಆಂಡ್ ಆರ್ಡರ್ ಯಾವ ಹಂತಕ್ಕೆ ಕುಲಗೆಟ್ಟಿದೆ ಎಂಬುದಕ್ಕೆ ಇನ್ನೇನಾದರೂ ಪುರಾವೆಗಳು ಬೇಕೇ? ಯಾರನ್ನು ಪ್ರಶ್ನಿಸಬೇಕು? ಯಾರಲ್ಲಿ ರಕ್ಷಣೆಗೆ ಮೊರೆ ಹೋಗಬೇಕು? ಈ ಪರಿಸ್ಥಿತಿಯಲ್ಲಿ ಮನೆ ಹೊಸ್ತಿಲಿನಿಂದ ಹೊರಗೆ ಕಾಲಿಟ್ಟವರು ಸುರಕ್ಷಿತವಾಗಿ ಮನೆಗೆ ವಾಪಸ್ ಆಗುತ್ತಾರೆ ಎಂಬುದಕ್ಕೆ ಏನು ಖಾತರಿ? ರಾಜಕೀಯವನ್ನು ಬದಿಗಿಟ್ಟೇ ನೋಡುವುದಾದರೂ ನಾವು ಪ್ರಶ್ನಿಸಬೇಕಿರುವುದು ಗೃಹ ಮಂತ್ರಿಯನ್ನೇ. ಪೊಲೀಸ್ ಇಲಾಖೆ ಇರುವುದು ಅವರದ್ದೇ ಸುಪರ್ದಿಯಲ್ಲಿ. ಆದರೆ ಹೋಮ್ ಮಿನಿಸ್ಟರ್ ನಿಜಕ್ಕೂ ಸಮರ್ಥರಿದ್ದಾರಾ? ಕಳೆದ ಮೂರು ವರ್ಷದಲ್ಲಿ ಇವರು ಹೋಮ್ ಮಿನಿಸ್ಟರೋ ಅಥವಾ ವರ್ಕ್ ಫ್ರಮ್ ಹೋಮ್ ಮಿನಿಸ್ಟರೋ ಎಂಬ ಅನುಮಾನ ಮೂಡುತ್ತಿದೆ.

ಗೃಹಮಂತ್ರಿ ಅಂದ್ರೆ ಮನೆಯೊಳಗೆ ಕೂತಿರುವ ಮಂತ್ರಿ ಅಂತೇನಾದರೂ ತಪ್ಪು ತಿಳಿದಿದ್ದಾರಾ? ವ್ಯಕ್ತಿಯಾಗಿ ಅತ್ಯಂತ ಘನತೆ ಉಳ್ಳವರಾಗಿರುವ ಪರಮೇಶ್ವರ್ ಗೃಹಮಂತ್ರಿಯಾಗಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ.

ರಾಜ್ಯದಲ್ಲಿ ನಡೆಯುವ ಯಾವುದೇ ಕ್ರೈಂ ಅಥವಾ ಗಲಭೆ-ಗದ್ದಲಗಳ ಕುರಿತು ಕೇಳಿದರೆ ಅವರಿಂದ ಬರುವ ರೆಡಿಮೇಡ್ ಉತ್ತರ ಒಂದೇ- ಗೊತ್ತಿಲ್ಲ.. ಮಾಹಿತಿ ಇಲ್ಲ! ಕಳೆದ ಸರಕಾರದ ಅವಧಿಯಲ್ಲೂ ನಾವು ನಿಷ್ಕ್ರಿಯ, ಅಸಮರ್ಥ ಅನಿಸುವ ಗೃಹಸಚಿವರನ್ನು ಕಂಡಿದ್ದೇವೆ. ಪ್ರತಿ ಕ್ರೈಮ್ ಅಥವಾ ಗಲಭೆ ಸಮಯದಲ್ಲೂ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತಿದ್ದ ಮಂತ್ರಿಗಳ ವರಸೆ ಸಾಕಷ್ಟು ಟ್ರೋಲ್‌ಗೆ ಗುರಿಯಾಗಿತ್ತು.

ಆದರೆ ಪರಮೇಶ್ವರ್ ಗೃಹಖಾತೆಯನ್ನು ನಿಷ್ಕ್ರಿಯತೆಯ ಪಾತಾಳಕ್ಕೆ ಕರೆದೊಯ್ದಿದ್ದಾರೆ. ಪೊಲೀಸರು ರಕ್ಷಣೆ ಕೊಡುವಲ್ಲಿ ಅಸಮರ್ಥರಾಗಿರೆ, ಶಿಕ್ಷಿಸುವ ಕೈಗಳನ್ನು ಕಳೆದು ಕೊಂಡಿದ್ದಾರೆ. ಇನ್ನೂ ಬೇಸರವೆಂದರೆ ಪೊಲೀಸರ ಜೀವಕ್ಕೆ ಮಾನಕ್ಕೆ ಇಲ್ಲಿ ಭದ್ರತೆ ಇಲ್ಲದಂತಾಗಿದೆ. ಇದು ದುಸ್ಥಿತಿಯ ಪರಮಾವಧಿ ಅಲ್ಲದೇ ಇನ್ನೇನು? ಹುಬ್ಬಳ್ಳಿಯ ಮಹಿಳೆಯನ್ನು ವಿವಸ್ತ್ರ ಗೊಳಿಸಿದ ಪ್ರಕರಣದಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕಿದ್ದುದು ಗೃಹಮಂತ್ರಿ. ಆದರೆ ಗೃಹಮಂತ್ರಿ ಈ ಬಗ್ಗೆ ಮಾಹಿತಿಯೇ ಇಲ್ಲದಂತೆ ವರ್ತಿಸುತ್ತಾರೆ. ಗೃಹಮಂತ್ರಿಯನ್ನು ಓವರ್‌ಟೇಕ್ ಮಾಡಿ ಡಿಸಿಎಂ ಪ್ರಕರಣಕ್ಕೆ ತೇಪೆ ಹಚ್ಚಲು ಹೋಗುತ್ತಾರೆ.

2023ರಿಂದ ಇಂದಿನ ತನಕ ನಡೆದ ಪ್ರತಿ ಪ್ರಕರಣದಲ್ಲೂ ಗೃಹಮಂತ್ರಿಗಳದ್ದು ಒಂದೇ ಪ್ರತಿಕ್ರಿಯೆ- ಗೊತ್ತಿಲ್ಲ, ಮಾಹಿತಿ ಇಲ್ಲ, ಅಂಥದ್ದೇನೂ ನಡೆದೇ ಇಲ್ಲ ಎಂದು. ಇನ್ನೂ ಗಮನಿಸಬೇಕಾದ ಅಂಶ ಅಂದರೆ, ಮುಖ್ಯಮಂತ್ರಿಗಳ ಹಾಗೂ ಉಪಮುಖ್ಯಮಂತ್ರಿಗಳ ಹೇಳಿಕೆ ಹೊರ ಬರುವ ತನಕ ಗೃಹಮಂತ್ರಿಗಳು ಬಾಯಿ ತೆರೆಯುವುದೇ ಇಲ್ಲ.

ಆನಂತರ ಅವರ ಹೇಳಿಕೆಯನ್ನೇ ಪುನರುಚ್ಚರಿಸುತ್ತಾರೆ. ಏನಿದರ ಅರ್ಥ? ಗೃಹಖಾತೆ ಸ್ವಾತಂತ್ರ್ಯ ಕಳೆದುಕೊಂಡಿದೆಯೇ? ಪರಮೇಶ್ವರ್ ರಬ್ಬರ್ ಸ್ಟ್ಯಾಂಪ್ ಆಗಿದ್ದಾರೆಯೇ? ಹುಬ್ಬಳ್ಳಿಯ ನೇಹಾ ಹಿರೇಮಠ್ ಹತ್ಯೆ ಪ್ರಕರಣದಿಂದ ಇತ್ತೀಚಿನ ಅಪ್ರಾಪ್ತೆ ಮೇಲಿನ ಅತ್ಯಾಚಾರ ಪ್ರಕರಣದ ತನಕ ಯಾವ ಪ್ರಕರಣಕ್ಕೂ ತಾರ್ಕಿಕ ಅಂತ್ಯಗಳು ಸಿಗುತ್ತಿಲ್ಲ.

ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಿಲ್ಲ. ಕಣ್ಮುಂದೆ ನಡೆದ ಹತ್ಯೆಗಳಿಗೂ ನ್ಯಾಯ ಸಿಗುತ್ತಿಲ್ಲವೆಂದರೆ ಇದರ ಹೊಣೆಗಾರಿಕೆ ಯಾರದ್ದು? ಕಲಬುರಗಿಯ ಟ್ರಿಪಲ್ ಮರ್ಡರ್, ದರ್ಶನ್ ಗ್ಯಾಂಗ್‌ನಿಂದ ರೇಣುಕಾಸ್ವಾಮಿ ಹತ್ಯೆ ಪ್ರಕರಣ, ಕೋಲಾರದ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷನ ಹತ್ಯೆ, ಅಸೆಂಚರ್ ಉದ್ಯೋಗಿಯ ಹತ್ಯೆ, ನಿವೃತ್ತ ಐಪಿಎಸ್ ಆಫೀಸರ್ ಓಂ ಪ್ರಕಾಶ್ ಹತ್ಯೆ, ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ, ಪಟ್ಟಿ ಮಾಡುತ್ತಾ ಹೋದರೆ ಮುಗಿಯಲಿಕ್ಕಿಲ್ಲ.

ಇವೆಲ್ಲವೂ ಪತ್ರಿಕೆಯಲ್ಲಿ ಸುದ್ದಿಯಾಗಿ ಹೆಡ್ ಲೈನ್‌ಗಳಲ್ಲಿ ಮೆರೆದ ಪ್ರಕರಣಗಳು. ಸುದ್ದಿಯೇ ಆಗದೇ ಪೊಲೀಸ್ ಪುಸ್ತಕಗಳಲ್ಲಿ ದಾಖಲಾಗುತ್ತಿರುವ, ದಾಖಲೂ ಆಗದೇ ಹೋಗಿರುವ ಪ್ರಕರಣಗಳ ಸಂಖ್ಯೆ ಇನ್ನೆಷ್ಟಿರಬಹುದು? ಸರಕಾರ ಕೊಡೋ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ಕ್ರೈಂ ರೇಟ್ ಕಡಿಮೆಯಾಗಿದೆಯಂತೆ.

2023ರಲ್ಲಿ 1293 ಹತ್ಯೆಗಳಾಗಿದ್ದವು; ಈ ವರ್ಷ ಅದು 1131ಕ್ಕೆ ಇಳಿದಿದೆ. ಅತ್ಯಾಚಾರ ಪ್ರಕರಣಗಳು 632ರಿಂದ 517ಕ್ಕೆ ಇಳಿದಿದೆ ಎಂದು ಗೃಹ ಇಲಾಖೆ ಬೆನ್ನು ತಟ್ಟಿಕೊಳ್ಳುತ್ತಿದೆ. ವರ್ಷಕ್ಕೆ ಐನೂರಕ್ಕೂ ಹೆಚ್ಚು ಅತ್ಯಾಚಾರ, ಸಾವಿರಕ್ಕೂ ಹೆಚ್ಚು ಕೊಲೆಗಳು ನಡೆಯುತ್ತಿದೆ ಎಂಬುದು ನಾಚಿಕೆಗೇಡಿನ ಸಂಗತಿ ಅಲ್ಲವೇ? ಬೆಂಗಳೂರು ಸೈಬರ್ ಅಪರಾಧಗಳ ಹಬ್ ಆಗಿ ಜಗತ್ತಿನಲ್ಲಿ ಗುರುತಿಸಿಕೊಳ್ಳುವಂತಾಗಿದೆ.

ದಿನ ಬೆಳಗಾದರೆ ಬೆಂಗಳೂರಿನಲ್ಲಿ ನೂರಾರು ಸೈಬರ್ ವಂಚನೆಗಳು ನಡೆಯುತ್ತಿವೆ. ಹಣ ಕಳೆದುಕೊಂಡವರಿಗೆ ಹಣ ಸಿಗುತ್ತಿಲ್ಲ. ಬ್ಲ್ಯಾಕ್‌ಮೇಲ್‌ಗೆ ಒಳಗಾಗುತ್ತಿರುವವರಿಗೆ ನ್ಯಾಯ-ಅಭಯ ಸಿಗುತ್ತಿಲ್ಲ. ಇದರಿಂದಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಕೇವಲ ಬೆಂಗಳೂರಿನ ಕಥೆಯೇ ಹೀಗಾದರೆ, ಕರ್ನಾಟಕದ ಇತರ ಭಾಗಗಳ ಕಥೆ ಏನು? ಬೆಂಗಳೂರಿನಲ್ಲಿ ನಡೆದ ಕ್ರೈಮ್‌ಗಳ ಬಗ್ಗೆಯೇ ಗೃಹಸಚಿವರಿಗೆ ಮಾಹಿತಿ ಇರುವುದಿಲ್ಲ ಅಂದರೆ ರಾಜ್ಯದ ಇತರ ಭಾಗಗಳಲ್ಲಿ ನಡೆಯುವ ಕ್ರೈಮ್‌ಗಳ ಮಾಹಿತಿ ಹೇಗಿದ್ದೀತು? ಇನ್ಯಾವ ಖಾತೆ ಇನ್ಯಾವ ಮಂತ್ರಿ ನಿಷ್ಕ್ರಿಯರಾಗಿ ಅಸಮರ್ಥರಾಗಿ ಇದ್ದರೂ ನಡೆದೀತು.

ಗೃಹ ಇಲಾಖೆ ನಿರ್ವೀರ್ಯವಾದರೆ ರಾಜ್ಯ ನೆಮ್ಮದಿ ಕಳೆದುಕೊಳ್ಳುತ್ತದೆ. ಪ್ರಜೆಗಳು ಸುಖ ನಿದ್ರೆ ಮಾಡದಂತಾಗುತ್ತದೆ. ಜೀವ ಕೈಲಿ ಹಿಡಿದುಕೊಂಡು ಬದುಕುವಂತಾಗುತ್ತದೆ. ಸಾಫ್ಟ್ ಆಗಿ ವರ್ತಿಸಬೇಕಿರುವ ಮಂತ್ರಿಗಳು ಇಲ್ಲಿ ವೈಲ್ಡ್ ಆಗಿ ವರ್ತಿಸುತ್ತಿದ್ದಾರೆ. ಟಫ್ ಆಗಿ ಇರಬೇಕಿರುವ ಗೃಹಮಂತ್ರಿ ಮೆದುವಾಗಿಬಿಟ್ಟಿದ್ದಾರೆ. ಇದು ರಾಜ್ಯದ ಸುರಕ್ಷತೆಗೆ ಒಳ್ಳೆಯದಲ್ಲ.

ಇನ್ನಾದರೂ ಪರಮೇಶ್ವರ್ ಗೃಹಖಾತೆಗೆ ತಕ್ಕುದಾಗಿ ವರ್ತಿಸಲಿ. ರಸ್ತೆಗಳಲ್ಲಿ ಹಗಲು ಹೊತ್ತೇ ಲಾಂಗು-ಮಚ್ಚು ಮಿಂಚುತ್ತಿವೆ. ರಸ್ತೆಗಳಲ್ಲಿ ವೀಲಿಂಗ್ ಹಾವಳಿ ಮಿತಿಮೀರಿದೆ. ಡ್ರಗ್, ಗಾಂಜಾ ವ್ಯವಹಾರ ಮತ್ತು ಸೇವನೆ ಎಗ್ಗಿಲ್ಲದೆ ಸಾಗುತ್ತಿದೆ. ಚಿಕ್ಕಪುಟ್ಟ ಹಣಕ್ಕಾಗಿ ಡಕಾಯತಿ ಮರ್ಡರ್, ಹಾಫ್ ಮರ್ಡರ್‌ಗಳಾಗುತ್ತಿವೆ. ಆಟೋಚಾಲಕರ ವೇಷದಲ್ಲಿ ದರೋಡೆ ಕೋರರು ಸೃಷ್ಟಿಯಾಗಿದ್ದಾರೆ. ಇನ್ನಾದರೂ ಗೃಹಮಂತ್ರಿಗಳು ಮೈಚಳಿ ಬಿಟ್ಟು ಹೊರ ಬಂದು ಖದರ್ ತೋರಲಿ.

**- ನವೀನ್** ಸಾಗರ್

---

# ಪ್ರಾಣಿಗಳೇ ಗುಣದಲಿ ಮೇಲು

ನಾನೊಂದು ಮೀನು, ಸಾಗರವೇ ನಮ್ಮ ಮನೆ, ನಮಗೆ ನಿಮ್ಮಂತೆ ಪ್ರಕೃತಿಯನ್ನು ಘಾಸಿಗೊಳಿಸಿ ಕಟ್ಟಿದ ಕಟ್ಟಡಗಳಿಲ್ಲ, ವಿಶಾಲ ಸಮುದ್ರದಲ್ಲಿ ಬೃಹತ್ ಜಲಚರ ಕುಟುಂಬದ ಜೊತೆ ವಾಸ, ನಿಮ್ಮಂತೆ ನಮಗೆ ಹಲವು ಭಾಷೆಗಳಿಲ್ಲ, ಇರುವುದೊಂದೇ ಭಾಷೆ, ಜಾತಿ ಧರ್ಮಗಳು ನಮಗೆ ಗೊತ್ತೇ ಇಲ್ಲ,

ನಿಮ್ಮಂತೆ ಯಾವ ಕಾನೂನುಗಳು ನಮ್ಮನ್ನು ಕಟ್ಟಿ ಹಾಕಿಲ್ಲ, ಸ್ವತಂತ್ರರು ನಾವು, ಕಳ್ಳರಲ್ಲ ನಾವು, ಅದಕ್ಕೆ ನಮಗೆ ಪೋಲೀಸರೇ ಇಲ್ಲ, ನಮಗೆ ನಾವೇ ರಾಜರು, ನಮ್ಮನ್ನಾಳುವ ಯಾವ ಪುಢಾರಿಗಳು ಇಲ್ಲ, ನಿಮ್ಮಂತೆ ನಮಗೆ ವಾಚು, ಕ್ಯಾಲೆಂಡರ್ ಗಳಿಲ್ಲ, ಹುಟ್ಟಿದಾಗಿನಿಂದ ಉಸಿರು ನಿಲ್ಲುವವರೆಗೂ ಜೀವಿಸಿರುವುದೇ ನಮ್ಮ ಬದುಕು, ನಮ್ಮಲ್ಲಿ ಡಾಕ್ಟರ್‌ಗಳಿಲ್ಲ, ಆಕ್ಟರ್ ಗಳಿಲ್ಲ, ಇಂಜಿನಿಯರ್‌ಗಳು, ಸಾಫ್ಟ್‌ವೇರ್‌ಗಳೂ ಇಲ್ಲ, ಪೂಜಾರಿಗಳ ಮಂತ್ರಗಳಿಲ್ಲ, ಜ್ಯೋತಿಷಿಗಳ ತಂತ್ರಗಳಿಲ್ಲ, ಪಾದ್ರಿಗಳ ಪ್ರಾರ್ಥನೆಗಳಿಲ್ಲ.

ಮೌಲ್ವಿಗಳ ನಮಾಜುಗಳಿಲ್ಲ, ಬುದ್ಧಿಜೀವಿಗಳೂ ಇಲ್ಲ, ಲದ್ದಿ ಜೀವಿಗಳು ಇಲ್ಲ, ದೇಶಭಕ್ತರೂ ಇಲ್ಲ, ದೇಶ ದ್ರೋಹಿಗಳೂ ಇಲ್ಲ, ಚಳುವಳಿಗಳೂ ಇಲ್ಲ, ಪ್ರದರ್ಶನಗಳೂ ಇಲ್ಲ, ಸಮಾಜ ಸೇವಕರೂ ಇಲ್ಲ, ತಲೆ ಒಡೆಯುವವರೂ ಇಲ್ಲ, ತಲೆ ಹಿಡಿಯುವವರೂ ಇಲ್ಲ, ಬೆನ್ನಿಗೆ ಚೂರಿ ಹಾಕುವವರೂ ಇಲ್ಲ, ಹೃದಯಕ್ಕೆ ಘಾಸಿಗೊಳಿಸುವವರೂ ಇಲ್ಲ, ಬ್ಯಾಂಕ್ ಅಕೌಂಟುಗಳೂ ಇಲ್ಲ, ಕಪ್ಪು ಹಣವು ಇಲ್ಲವೇ ಇಲ್ಲ, ಚಿಕನ್ ಕಬಾಬ್‌ಗಳಿಲ್ಲ,

ಹೋಳಿಗೆ ತುಪ್ಪಗಳೂ ಇಲ್ಲ, ಅರಿಶಿನ ಕುಂಕುಮಗಳಿಲ್ಲ, ಕಾಯಿ ಕರ್ಪೂರಗಳು ಗೊತ್ತೇ ಇಲ್ಲ, ಮದುವೆಗಳಿಲ್ಲ, ಡೈವೋರ್ಸ್‌ಗಳೂ ತಿಳಿದಿಲ್ಲ, ಜೀನ್ಸ್ ಪ್ಯಾಂಟುಗಳಿಲ್ಲ, ಮಿಡಿ ಚೂಡಿದಾರ್‌ಗಳೂ ಇಲ್ಲ, ಬ್ಯೂಟಿ ಪಾರ್ಲರ್ ಗಳೂ ಇಲ್ಲ, ಯೋಗ ಧ್ಯಾನ ಸೆಂಟರ್‌ಗಳೂ ಇಲ್ಲ, ಅಶ್ಲೀಲವೂ ಇಲ್ಲ, ಸೌಂದರ್ಯವೂ ಇಲ್ಲ, ಸ್ವಚ್ಛಂದ ಬದುಕು, ನಿಷ್ಕಲ್ಮಶ ಸಂತಾನ, ಕಷ್ಟ ಗಳೂ, ಅಪಾಯಗಳು ನಮಗೂ ಇವೆ, ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ,

ಕ್ಷಮಿಸಿ, ನಾವು ನಿಮ್ಮಂತೆ ನಾಗರಿಕ ಮನುಷ್ಯರಲ್ಲ ಅನಾಗರಿಕ ಜಲಚರಗಳು, ಆದರೂ ನಿಮ್ಮಲ್ಲೇ ಕೆಲವರು ನನಗೆ ಮಾತನಾಡುತ್ತಿದ್ದುದು ಕೇಳಿಸಿತು, ಮನುಷ್ಯರಿಗಿಂತ ಪ್ರಾಣಿಗಳೇ ಗುಣದಲಿ ಮೇಲು, ನಿಜವೇ? ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿಂದು ಬದುಕುತ್ತವಂತೆ, ಏಡಿ ಗಳು ಮೇಲಕ್ಕೇರಲು ಪ್ರಯತ್ನಿಸುವ ಮತ್ತೊಂದು ಏಡಿಯ ಕಾಲು ಹಿಡಿದು ಕೆಳಕ್ಕೆ ಎಳೆಯುತ್ತವಂತೆ, ತಲೆತಗ್ಗಿಸಿ ನಡೆಯುವ ಕುರಿಗಳು ಮುಂದೆ ಸಾಗುತ್ತಿದ್ದ ಕುರಿಯೊಂದು ಹಳ್ಳಕ್ಕೆ ಬಿದ್ದರೆ ಹಿಂಬಾಲಿಸುತ್ತಿದ್ದ ಎಲ್ಲಾ ಕುರಿಗಳು ಹಳ್ಳಕ್ಕೆ ಬೀಳುತ್ತವಂತೆ, ಕೆರೆ ತಟದ ಕಪ್ಪೆಯೊಂದು ಒಮ್ಮೆ ವಟವಟ ಶುರು ಮಾಡಿದರೆ ಇಡೀ ಕಪ್ಪೆಗಳ ಸಮೂಹವೇ ವಟವಟ ಎನ್ನಲು ಪ್ರಾರಂಭಿಸುತ್ತವಂತೆ, ಕೋಗಿಲೆಗಳು ಮರಿ ಮಾಡಿಸಲು ತಮ್ಮ ಮೊಟ್ಟೆಗಳನ್ನು ಕಾಗೆಗಳ ಗೂಡಿನಲ್ಲಿ ಇಟ್ಟು ಹೋಗುತ್ತದಂತೆ. ಇನ್ನೊಂದು ಪ್ರಾಣಿಯ ಆಹಾರವನ್ನು ವಂಚಿಸಿ ತಿನ್ನುವುದೇ ನರಿ ಬುದ್ಧಿಯಂತೆ, ಇನ್ನೊಬ್ಬರ ರಕ್ತಹೀರಿ ಬದುಕುವುದೇ ಸೊಳ್ಳೆಗಳ ಕೆಲಸವಂತೆ, ಮೋರಿಗಳಲ್ಲಿ ಹೊರಳಾಡಿ ತನ್ನ ದೇಹವನ್ನು ಗಲೀಜು ಮಾಡಿಕೊಳ್ಳುವುದೇ ಹಂದಿಗಳಿಗೆ ಸಂಭ್ರಮವಂತೆ, ಊಸರವಳ್ಳಿ ತನ್ನ ಬಣ್ಣ ಆಗಾಗ ಬದಲಾಯಿಸುತ್ತಾ ಇತರ ಪ್ರಾಣಿಗಳನ್ನು ವಂಚಿಸುತ್ತದಂತೆ.

ಇನ್ನೊಂದೆಡೆ, ನಾಯಿಯು ಅನ್ನ ಹಾಕಿದ ಒಡೆಯನಿಗೆ ತುಂಬಾ ನಿಯತ್ತಾಗಿರುತ್ತದಂತೆ, ಹೊಟ್ಟೆ ಹಸಿವಾದಾಗ ಮಾತ್ರ ಹುಲಿಯು ಬೇಟೆಯಾಡುತ್ತದಂತೆ, ಗೀಜಗ ಮಳೆ ಗಾಳಿ ಚಳಿಗೂ ನಾಶವಾಗದ ಗೂಡನ್ನು ನಿರ್ಮಿಸುತ್ತದಂತೆ, ವಿಷದ ಹಾವುಗಳು ಕೂಡ ತಮ್ಮ ಜೀವಕ್ಕೆ ಅಪಾಯವಾದಾಗ ಮಾತ್ರ ಇತರರನ್ನು ಕಚ್ಚುತ್ತದಂತೆ, ಅನೇಕ ಚಿಟ್ಟೆಗಳು - ಕೀಟಗಳು ಸಸ್ಯಗಳಿಗೆ ಪರಾಗಸ್ಪರ್ಶ ಮಾಡಿಸಿ ರೈತರ ಫಸಲು ಉತ್ತಮವಾಗಲು ಸಂಜೀವಿನಿಯಂತೆ ಕೆಲಸ ಮಾಡುತ್ತವಂತೆ, ಎರೆ ಹುಳುಗಳು ಕೃಷಿ ಭೂಮಿಯನ್ನು ಫಲವತ್ತು ಮಾಡುತ್ತವಂತೆ ಹಸುವಿನ ಹಾಲು ತುಪ್ಪ ಬೆಣ್ಣೆ ಮೊಸರು ಕೊನೆಗೆ ಅದರ ಮಾಂಸವು ವಿಶ್ವದ ಆಹಾರ ಪದ್ಧತಿಯ ಬಹುಮುಖ್ಯ ಭಾಗವಂತೆ, ಇವೆಲ್ಲವೂ ನಮ್ಮ ಸುತ್ತಲ ಪರಿಸರದ ಪ್ರಾಣಿ ಪಕ್ಷಿಗಳ ಗುಣ ದೋಷಗಳು.

ಈ ಮನುಷ್ಯನೆಂಬ ಪ್ರಾಣಿ ಬಹುತೇಕ ಈ ಎಲ್ಲಾ ಗುಣಗಳನ್ನೂ ತನ್ನಲ್ಲಿ ಅಡಗಿಸಿಕೊಂಡಿದ್ದಾನೆ. ಆದರೆ ತನ್ನ ಚಿಂತನಾಕ್ರಮದ, ಸ್ವಾರ್ಥ ದುರಾಸೆಯಿಂದ ಯಾವ ಗುಣ, ಯಾವ ಸಾಮರ್ಥ್ಯ, ಯಾವ ಕಲೆ ಯಾವ ವಿದ್ಯೆ ಯಾವಾಗ ಉಪಯೋಗಿಸಬೇಕು ಎಂದು ಸರಿಯಾಗಿ ಅರ್ಥಮಾಡಿಕೊಳ್ಳದೆ ಗೊಂದಲಕ್ಕೆ ಒಳಗಾಗಿದ್ದಾನೆ. ಅದಕ್ಕಾಗಿ ತನ್ನದಲ್ಲದ ಮುಖವಾಡ ತೊಟ್ಟಿದ್ದಾನೆ. ಒಂದುವೇಳೆ ಆತ ಈ ಮುಖವಾಡ ಕಳಚಿ, ಸ್ವಾರ್ಥ ತ್ಯಜಿಸಿ, ತಾನು ಸಂಘಜೀವಿ, ತ್ಯಾಗಜೀವಿ ಎಂದು ಭಾವಿಸಿ ಆ ರೀತಿ ವರ್ತಿಸಿದ್ದೇ ಆದರೆ ಅವನಂತ ಅತ್ಯದ್ಭುತ ಪ್ರಾಣಿ ಈ ವಿಶ್ವದಲ್ಲೇ ಇಲ್ಲ. ನಾವೆಲ್ಲ ಹಾಗಾಗೋಣ ಎಂಬ ನಿರೀಕ್ಷೆಯ ಆಶಯದೊಂದಿಗೆ.



**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

---

# ಔಷಧೀಯ ಸಸ್ಯಗಳ ಕೃಷಿಯಿಂದ ವರುಷಕ್ಕೆ ರೂ.10 ಕೋಟಿ ಆದಾಯ

ರಾಜಸ್ಥಾನದ ನಗೌರ್ ಜಿಲ್ಲೆಯ ರಾಜಪುರ ಗ್ರಾಮದ ರಾಕೇಶ್ ಚೌಧರಿ ಬಿ. ಎಸ್ಸಿ. ಪದವಿ ಶಿಕ್ಷಣ ಮುಗಿಸಿ, ಹಳ್ಳಿಗೆ ಮರಳಿದರು. ಔಷಧೀಯ ಸಸ್ಯಗಳ ಕೃಷಿ ಮಾಡುವ ತನ್ನ ಯೋಜನೆಯನ್ನು ಕುಟುಂಬದವರಿಗೂ ಸ್ನೇಹಿತರಿಗೂ ತಿಳಿಸಿದಾಗ ಅವರಿಗೆ ಸಿಕ್ಕಿದ ಪ್ರತಿಕ್ರಿಯೆಗಳು: ಇದರಲ್ಲಿ ನಿನಗೆ ಸೋಲು ಖಂಡಿತ, ನೀನು ಎಲ್ಲ ಹಣವನ್ನೂ ಕಳೆದುಕೊಳ್ಳುತ್ತಿ.

ಇದರಲ್ಲೇನೂ ಅಚ್ಚರಿಯಿಲ್ಲ. ಯಾಕೆಂದರೆ, ನೀವು ಡಿಗ್ರಿ ಗಳಿಸಿದರೆ ಸಂಬಳದ ಕೆಲಸಕ್ಕೆ ಹೋಗಬೇಕೆಂದು ಜನರು ನಿರೀಕ್ಷಿಸುತ್ತಾರೆ. ಈಗಿನ ಯುವಜನರಿಗಂತೂ ಕೃಷಿಯ ಬದಲಾಗಿ ಕೆಲವು ಸಾವಿರ ರೂಪಾಯಿ ಸಂಬಳದ ಕೆಲಸವೇ ಇಷ್ಟ ಎನ್ನುತ್ತಾರೆ ರಾಕೇಶ್.

2003ರಲ್ಲಿ ತಮ್ಮ ಕೃಷಿ ಜಮೀನಿನ ನಿರ್ವಹಣೆಯಲ್ಲಿ ತಂದೆಗೆ ಸಹಕರಿಸುತ್ತಿದ್ದ ರಾಕೇಶ್ ಕೃಷಿಯ ಹೊಸ ಸಾಧ್ಯತೆಗಳ ಬಗ್ಗೆ ಮಾಹಿತಿ ಪರಿಶೀಲಿಸುತ್ತಿದ್ದರು. ಆಗ ಅವರಿಗೆ ರಾಜಸ್ಥಾನ ಔಷಧೀಯ ಸಸ್ಯಗಳ ಬೋರ್ಡಿನ ಒಪ್ಪಂದ ಕೃಷಿ ಸ್ಕೀಮ್ ಬಗ್ಗೆ ತಿಳಿಯಿತು. ಔಷಧೀಯ ಸಸ್ಯಗಳ ಒಪ್ಪಂದ ಕೃಷಿ ಮಾಡುವ ಕೃಷಿಕರಿಗೆ ಆ ಬೋರ್ಡ್ ಸಹಾಯಧನ ಒದಗಿಸುತ್ತಿತ್ತು. ಕೃಷಿ ಉತ್ಪನ್ನಗಳ ಉತ್ಪಾದನೆ ಮತ್ತು ಒದಗಣೆಗಾಗಿ ಕೃಷಿಕರು ಹಾಗೂ ಸಂಸ್ಕರಣೆ ಮತ್ತು/ ಅಥವಾ ಮಾರ್ಕೆಟಿಂಗ್ ಘಟಕಗಳ ನಡುವಣ ಒಪ್ಪಂದವೇ ಒಪ್ಪಂದ ಕೃಷಿ. ಆದರೆ ಆ ಕಾಲಘಟ್ಟದಲ್ಲಿ ಅವರ ಪ್ರದೇಶದಲ್ಲಿ ಅವರ ಕುಟುಂಬದ ಸಹಿತವಾಗಿ ಯಾರೊಬ್ಬರೂ ಪಾರಂಪರಿಕ ಕೃಷಿಯ ಹೊರತಾಗಿ ಬೇರೇನನ್ನೂ ಕೈಗೆತ್ತಿಕೊಳ್ಳಲು ತಯಾರಿರಲಿಲ್ಲ.

ಅದೇನಿದ್ದರೂ ಈ ಅವಕಾಶವನ್ನು ಬಳಸಿಕೊಳ್ಳಲು ರಾಕೇಶ್ ನಿರ್ಧರಿಸಿದರು. ಔಷಧೀಯ ಸಸ್ಯಗಳ ಇಲಾಖೆಯ ಅಧಿಕಾರಿಗಳು ಭಾರೀ ಲಾಭದಾಯಕ ಔಷಧೀಯ ಸಸ್ಯಗಳ ಬಗ್ಗೆ ಇವರಿಗೆ ಮಾಹಿತಿ ನೀಡಿದರು.

ಆದರೆ ಹೊಸ ಯೋಜನೆಯನ್ನು ಕಾರ್ಯಗತಗೊಳಿಸುವುದು ಸುಲಭದ ಕೆಲಸವಾಗಿರಲಿಲ್ಲ. ರಾಕೇಶರಿಗೆ ಹಣ ಹೊಂದಿಸುವುದೇ ದೊಡ್ಡ ಸವಾಲಾಗಿತ್ತು. ಸಾಲ ಪಡೆಯಲು ಭದ್ರತೆ ಒದಗಿಸಲೇ ಬೇಕಾಗಿತ್ತು. ಆದರೆ ಅವರದ್ದೇ ಆದ ಜಮೀನು ಇರಲಿಲ್ಲ. ಹಾಗಾಗಿ ಪತ್ನಿಯ ಒಡವೆಗಳನ್ನು ಅಡವಿಟ್ಟು ಸಾಲ ಪಡೆದರು. ಮನೆಯಲ್ಲಿದ್ದ ಕೆಲವು ದನಕರುಗಳನ್ನೂ ಮಾರಾಟ ಮಾಡಿ, ತನ್ನ ಮೊದಲನೆಯ ಬಿತ್ತನೆಗಾಗಿ ಹಣ ಹೊಂದಿಸಿದರು ರಾಕೇಶ್. ತನ್ನ ಕುಟುಂಬದ ಜಮೀನಿನ ಒಂದು ಭಾಗದಲ್ಲಿ 2004ರಲ್ಲಿ ಅವರು ಮೊದಲಾಗಿ ಬಿತ್ತಿದ ಎರಡು ಔಷಧೀಯ ಸಸ್ಯಗಳು: ಅಗ್ನಿಶಿಖೆ (ಗೌರಿ ಹೂ) ಮತ್ತು ಲಿಕೋರೈಸ್ (ಗ್ಲೈಸಿರೈಸಾ ಗ್ಲಾಬ್ರಾ). ಆದರೆ ಮೊದಲ ಯತ್ನದಲ್ಲೇ ಭಾರೀ ನಷ್ಟವಾಯಿತು. ರಾಜಸ್ಥಾನದಲ್ಲಿ ಬೇಸಗೆಯಲ್ಲಿ ಒಣ ಮತ್ತು ಬಿಸಿ ಹವಾಮಾನ ಹಾಗೂ ಚಳಿಗಾಲದಲ್ಲಿ ವಿಪರೀತ ಚಳಿ. ನಮ್ಮ ಪ್ರದೇಶದ ಹವಾಮಾನ ಮತ್ತು ಆ ಸಸ್ಯಗಳಿಗೆ ಅಗತ್ಯವಾದ ಹವಾಮಾನದ ಬಗ್ಗೆ ನಾನು ಆಳವಾಗಿ ಅಧ್ಯಯನ ಮಾಡಲಿಲ್ಲ. ಇದರಿಂದಾಗಿ ಸಸ್ಯಗಳು ಬೆಳೆಯಲಿಲ್ಲ. ನಾನು ಬಹಳ ಹಣ ಕಳೆದುಕೊಂಡೆ ಎಂದು ನೆನಪು ಮಾಡಿಕೊಳ್ಳುತ್ತಾರೆ ರಾಕೇಶ್.

ಎಲ್ಲರೂ ಇವರ ಹುಚ್ಚಾಟದ ಬಗ್ಗೆ ಟೀಕೆ ಮಾಡಿದರೂ ರಾಕೇಶ್ ಎದೆಗುಂದಲಿಲ್ಲ. ಸಾಲದಲ್ಲಿ ಮುಳುಗಿದರೂ ಔಷಧೀಯ ಸಸ್ಯಗಳ ಕೃಷಿ ತೊರೆಯಲಿಲ್ಲ. ಎರಡನೆಯ ಬೆಳೆಗಾಗಿ ಅವರು ತನ್ನ ಟ್ರ್ಯಾಕ್ಟರನ್ನೇ ಅಡವಿಟ್ಟು ಸಾಲ ಪಡೆದು, ಲೋಳೆಸರ ಸಸಿಗಳನ್ನು ನೆಟ್ಟರು. ಈ ಬೆಳೆ ಚೆನ್ನಾಗಿ ಬೆಳೆದು ರಾಕೇಶ್ ಲಾಭ ಗಳಿಸಲು ಸಾಧ್ಯವಾಯಿತು.

ಯಾವುದೇ ಬೆಳೆ ಬೆಳೆಸುವ ಮುನ್ನ ಅದರ ಬಗ್ಗೆ ಅಧ್ಯಯನ ಮಾಡಬೇಕು ಮತ್ತು ತನ್ನ ಜಮೀನಿನ ಮಣ್ಣಿನ ಗುಣಲಕ್ಷಣಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು ಎಂಬುದು ಅವರು ಅನುಭವದಿಂದ ಕಲಿತ ಪಾಠ. ಹೊಸ ಬೆಳೆಯ ಕೃಷಿಗೆ ಕೈಹಾಕುವ ಮುನ್ನ ಈ ಮೂರು ಸಂಗತಿಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕೆಂದು ಅವರಿಗೆ ಅರಿವಾಗಿತ್ತು: ಆ ಪ್ರದೇಶದ ಹವಾಮಾನ, ಅತ್ಯುತ್ತಮ ಬೀಜ ಅಥವಾ ಸಸಿಗಳ ಲಭ್ಯತೆ ಮತ್ತು ಆ ಬೆಳೆಯ ಫಸಲಿನ ಮಾರುಕಟ್ಟೆ ಬೇಡಿಕೆ.

2005ರ ಹೊತ್ತಿಗೆ ಔಷಧೀಯ ಸಸ್ಯಗಳ ಕೃಷಿಯ ಯಶಸ್ಸಿನ ಸೂತ್ರ ರಾಕೇಶರಿಗೆ ಕರಗತವಾಯಿತು: ಅವರ ಜಮೀನಿನ ಮಣ್ಣು, ಬೆಳೆಸಬೇಕಾದ ಬೆಳೆ ಮತ್ತು ಅದಕ್ಕೆ ಅಗತ್ಯವಾದ ಹವಾಮಾನ ಇವನ್ನು ಸರಿಯಾಗಿ ಅಧ್ಯಯನ ಮಾಡಿದ್ದರು. ಅವರೀಗ ಮೂರನೆಯ ಸಂಗತಿಯ ಬೆನ್ನು ಹತ್ತಿದರು; ಅದೇನೆಂದರೆ ಫಸಲಿನ ಖರೀದಿದಾರ. ಕೊನೆಗೂ ಖರೀದಿದಾರ ಒಬ್ಬನನ್ನು ಪತ್ತೆ ಮಾಡಿದರು. ಆತ ಇವರ ಲೋಳೆಸರದ ಫಸಲನ್ನು ಕಿಲೋಕ್ಕೆ ರೂ.1.50 ದರದಲ್ಲಿ ಖರೀದಿಸಿದ.

ಔಷಧೀಯ ಸಸ್ಯಗಳ ಕೃಷಿಯನ್ನು ಹೆಚ್ಚೆಚ್ಚು ಕೃಷಿಕರು ಕೈಗೆತ್ತಿಕೊಳ್ಳುವಂತೆ ಮಾಡಲು ಇದು ಸರಿಯಾದ ಸಮಯ ಎಂದು ನಿರ್ಧರಿಸಿದರು ರಾಕೇಶ್. ಆದರೆ ರಾಜಸ್ಥಾನದ ಹೊರತಾಗಿ ಬೇರೆ ರಾಜ್ಯಗಳಿಗೆ ಭೇಟಿ ನೀಡದಿದ್ದ ರಾಕೇಶರಿಗೆ ಹೊಸಬರನ್ನು ಪರಿಚಯ ಮಾಡಿಕೊಳ್ಳುವುದೇ ದೊಡ್ಡ ಸವಾಲಾಗಿತ್ತು. ಮುಂದಿನ ಹೆಜ್ಜೆ ಇಡಲೇ ಬೇಕೆಂದು ಸಂಕಲ್ಪ ಮಾಡಿದ ರಾಕೇಶ್ ಬೇರೆಬೇರೆ ರಾಜ್ಯಗಳಿಗೆ ಹೋಗಿ, ಅಲ್ಲಿನ ಕೃಷಿಕರನ್ನೂ ಭೇಟಿಯಾಗಿ, ಔಷಧೀಯ ಸಸ್ಯಗಳ ಕೃಷಿಯ ಲಾಭಗಳನ್ನು ವಿವರಿಸಿ ಅವರ ಮನವೊಲಿಸತೊಡಗಿದರು. ಇದರಿಂದಾಗಿ, ಈಗ ರಾಜಸ್ಥಾನ, ಉತ್ತರಪ್ರದೇಶ, ಹರಿಯಾಣ, ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ಗುಜರಾತ್ ರಾಜ್ಯಗಳ ಸುಮಾರು 3,000 ಕೃಷಿಕರು ರಾಕೇಶರ ಜೊತೆ ಕೈಗೂಡಿಸಿದ್ದಾರೆ. ಆಯಾ ಪ್ರದೇಶ ಮತ್ತು ಹವಾಮಾನಕ್ಕೆ ಸೂಕ್ತವಾದ ಔಷಧೀಯ ಸಸ್ಯಗಳನ್ನು ಬೆಳೆಸುತ್ತಿದ್ದಾರೆ. ಇವರ ಸಾಧನೆಯನ್ನು ಗುರುತಿಸಿ, ಇವರನ್ನು ನವದೆಹಲಿಯ ರಾಷ್ಟ್ರೀಯ ಔಷಧೀಯ ಸಸ್ಯಗಳ ಬೋರ್ಡಿನ ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

ಇವೆಲ್ಲವನ್ನೂ ಸಾಧಿಸಲು ರಾಕೇಶರಿಗೆ ಹತ್ತು ವರುಷಗಳೇ ಬೇಕಾಯಿತು. ಅಂತೂ 2017ರಲ್ಲಿ ವಿನಾಯಕ ಹರ್ಬಲ್ ಎಂಬ ಹೆಸರಿನ ಘಟಕವನ್ನು ಸ್ಥಾಪಿಸಿದರು. ಅವರ ಬಳಗದ ಕೃಷಿಕರು ಈಗ ಬೆಳೆಯುತ್ತಿರುವ ವಿವಿಧ ಔಷಧೀಯ ಸಸ್ಯಗಳ ಸಂಖ್ಯೆ 120. ಅವುಗಳ ಎಲೆ, ಹಣ್ಣು, ಬೀಜ, ಬೇರು, ಕಾಂಡ - ಇವನ್ನೆಲ್ಲ ದೇಶದ ಉದ್ದಗಲದ ಫಾರ್ಮಾ ಕಂಪೆನಿಗಳಿಗೂ ಡೀಲರುಗಳಿಗೂ ಮಾರಾಟ ಮಾಡಿ ಮತ್ತು ತಮ್ಮದೇ ಘಟಕದ ಆಯುರ್ವೇದ ಔಷಧಿಗಳ ಮಾರಾಟದಿಂದ ಅವರು ಗಳಿಸುತ್ತಿರುವ ವಾರ್ಷಿಕ ಆದಾಯ ರೂ.10 ಕೋಟಿ!

ವಿನಾಯಕ ಹರ್ಬಲ್ ಜೊತೆ ಕೈಜೋಡಿಸಿರುವ ಕೃಷಿಕರು ಬೆಳೆಸುತ್ತಿರುವ ಔಷಧೀಯ ಸಸ್ಯಗಳಲ್ಲಿ ಇವು ಸೇರಿವೆ: ಲೋಳೆಸರ, ಅಶ್ವಗಂಧ, ಚಿಯಾ (ಅಗಸೆ), ಮೆಂತೆ, ಸ್ಟೀವಿಯಾ (ಸಿಹಿ ತುಳಸಿ), ಅಕರ್‌ಕರ (ಅಥವಾ ಅಕರಕರಭಾ; ಅನಾಸೈಕ್ಲಸ್ ಪೈರೆತ್ರಮ್), ಚಮೋಮೈಲ್ (ಮಾಟ್ರಿಕರಿಯಾ ಚಮೋಮಿಲ್ಲಾ ಮತ್ತು ಚಮೇಮೆಲಮ್ ನೊಬೈಲ್ ಎಂಬ ಎರಡು ಸ್ಪೀಷೀಸ್ ಇವೆ. ಇದರ ಟೀ ನರಸಂಬಂಧಿ ಆರೋಗ್ಯ ಸಮಸ್ಯೆಗಳಿಗೆ ಔಷಧಿಯಾಗಿ ಬಳಕೆ.) ಮತ್ತು ಫೆನ್ನೆಲ್ (ಫೋನಿಕುಲಮ್ ವಲ್ಗಾರೆ, ಗಾಢ ಹಳದಿ ಹೂಗಳ ಸಸ್ಯ; ಇದರ ಮೃದು ಕಾಂಡ, ಎಲೆಗಳು ಮತ್ತು ಬೀಜಗಳು ಔಷಧಿಯಾಗಿ ಬಳಕೆ.)

ಹೆಚ್ಚೆಚ್ಚು ಯುವ ಜನರು ಔಷಧಿಯ ಸಸ್ಯಗಳ ಕೃಷಿಯಲ್ಲಿ ತೊಡಗಬೇಕೆಂಬುದು ರಾಕೇಶ್ ಚೌಧರಿ ಅವರ ಆಶಯ. ಆದರೆ ಈಗ ಕೃಷಿಕರ ಮಕ್ಕಳು ಶಿಕ್ಷಣ ಪಡೆದು ಸಂಬಳದ ಕೆಲಸ ಹುಡುಕುತ್ತಾರೆಯೇ ವಿನಃ ಕೃಷಿಯನ್ನು ಜೀವನೋಪಾಯವಾಗಿ ಸ್ವೀಕರಿಸಲು ತಯಾರಿಲ್ಲ ಎನ್ನುತ್ತಾರೆ ರಾಕೇಶ್. ಸರಿಯಾಗಿ ಯೋಜನೆ ರೂಪಿಸಿ ಬೇಸಾಯ ಮಾಡಿ, ಫಸಲನ್ನು ಯೋಗ್ಯ ದರಕ್ಕೆ ಮಾರಾಟ ಮಾಡಿದರೆ ಕೃಷಿ ಖಂಡಿತವಾಗಿ ಲಾಭದಾಯಕ ಎಂಬುದು ಅವರ ನಂಬಿಕೆ.



**- ರಾಕೇಶ್ ಚೌಧರಿ;** ಲೋಳೆಸರ ಹೊಲದಲ್ಲಿ ರಾಕೇಶ್ ಚೌಧರಿ

---

# ಬಿಕ್ಕಳಿಕೆ ಏನು? ಹೇಗೆ? ಏಕೆ?

ಬಿಕ್ಕಳಿಕೆಗೆ ಆಂಗ್ಲ ಭಾಷೆಯಲ್ಲಿ ಹಿಕಪ್ಸ್ ಎಂದು ಹೆಸರು. ಈ ಎರಡೂ ಪದಗಳು ಬಿಕ್ಕಳಿಕೆ ಬರುವಾಗ ಉಂಟಾಗುವ ವಿಚಿತ್ರವಾದ ಶಬ್ದದಿಂದ ಬಂದಿವೆ. ಬಿಕ್ಕಳಿಕೆಯು ವಪೆ ಸ್ನಾಯುವಿನ ಅನೈಚ್ಛಿಕ ಸಂಕುಚನದಿಂದ ಉಂಟಾಗುತ್ತದೆ. ವಪೆಯೆಂಬುದು ಎದೆಯ ಒಳಗಿನ ರಚನೆಗಳಾದ ಶ್ವಾಸಕೋಶ, ಹೃದಯ ಮುಂತಾದವುಗಳನ್ನು ಹೊಟ್ಟೆಯ ಒಳಗಿನ ಅಂಗಗಳಾದ ಲಿವರ್, ಜಠರ-ಪ್ಲೀಹ, ಕರುಳು ಮುಂತಾದವುಗಳಿಂದ ಬೇರ್ಪಡಿಸುವ ಛತ್ರಿಯಾಕಾರದ ಸ್ನಾಯು. ಒಂದೆರಡು ನಿಮಿಷಗಳಿಂದ ಐದು ನಿಮಿಷಗಳವರೆಗಿನ ಸಣ್ಣ ಅವಧಿಯ ಬಿಕ್ಕಳಿಕೆಗಳು ಆಗಾಗ ಬಂದು ಹೋಗುವುದುಂಟು. ಅವು ತಮ್ಮಷ್ಟಕ್ಕೆ ತಾವೇ ನಿಲ್ಲುತ್ತವೆ. ಮನೆ ಮದ್ದು, ಆಸ್ಪತ್ರೆ ಮದ್ದು ಬೇಕಿಲ್ಲ.

ಆದರೆ ದೀರ್ಘಕಾಲಿಕ ಬಿಕ್ಕಳಿಕೆ ಪ್ರಕರಣಗಳು ಸಾಕಷ್ಟು ತೊಂದರೆಯನ್ನು ನೀಡುತ್ತವೆ. ಅವು ದೇಹದ ಒಳಗಿನ ಯಾವುದೋ ವ್ಯಾಧಿಯ ಸಂಕೇತವಿರಬಹುದು. 48 ಗಂಟೆಗಳಿಗೂ ಮಿಕ್ಕಿ ಬರುವ ಪ್ರಕರಣಗಳನ್ನು ದೀರ್ಘಕಾಲಿಕ ಎಂದೂ, ಒಂದು ತಿಂಗಳಿಗೂ ಮಿಕ್ಕಿ ಬರುತ್ತಿರುವ ಬಿಕ್ಕಳಿಕೆಯನ್ನು ವಾಸಿ ಮಾಡಲಾಗದ ಬಿಕ್ಕಳಿಕೆಯೆಂದೂ ವರ್ಗೀಕರಿಸಲಾಗಿದೆ. ವೈದ್ಯಕೀಯವಾಗಿ ಬಿಕ್ಕಳಿಕೆಯನ್ನು ಸಿಂಗಲ್ಟಸ್ ಎಂದು ಕರೆಯುತ್ತಾರೆ. ಸಿಂಗಲ್ಟ್ಸ್ ಎಂಬುದು ಲ್ಯಾಟಿನ್ ಭಾಷೆಯ ಪದ; ಅಳುವಾಗ ಉಸಿರುಗಟ್ಟುವ ಪರಿಯನ್ನು ಅದು ವಿವರಿಸುತ್ತದೆ.




**ಸಂಭಾವ್ಯತೆ:** ಸಂಭಾವ್ಯತೆಯು ಪುರುಷ, ಮಹಿಳೆಯರಿಬ್ಬರಲ್ಲೂ ಸಮ ಸಮ. ಆದರೆ ದೀರ್ಘಕಾಲಿಕ ಪ್ರಕರಣಗಳು ಪುರುಷರಲ್ಲೇ ಹೆಚ್ಚು. ಬಿಕ್ಕಳಿಕೆ ಎಲ್ಲ ವಯಸ್ಸಿನವರಲ್ಲಿಯೂ ಬರಬಹುದು. ನವಜಾತ ಶಿಶುಗಳಲ್ಲಿಯೂ ಗರ್ಭಸ್ಥ ಕೂಸುಗಳಲ್ಲಿಯೂ ಬರಬಹುದು. ಹೊಟ್ಟೆಯ ಸೋನೋಗ್ರಫಿ ಸ್ಕ್ಯಾನಿಂಗ್ ತಂತ್ರವು ಅನ್ವೇಷಣೆಗೊಂಡ ಅನಂತರ ಗರ್ಭಸ್ಥ ಕೂಸು ಬಿಕ್ಕಳಿಸುತ್ತದೆಂಬುದು ತಿಳಿಯಿತು.

**ಅಲ್ಪಕಾಲಿಕ ಬಿಕ್ಕಳಿಕೆಗೆ ಕಾರಣಗಳು:** ಆಹಾರದಿಂದ, ಮದಿರೆಯಿಂದ, ಗಾಳಿಯಿಂದ ಉಂಟಾದ ಜಠರದ ಉಬ್ಬರದಿಂದ, ಕಾರ್ಬೋನೇಟಡ್ ಪಾನೀಯಗಳ ಅತಿಯಾದ ಬಳಕೆ, ಜಠರದ ಒಳಗಿನ ಉಷ್ಣತೆ, ಬಿಸಿಬಿಸಿ ಕಾಫಿ ಅಥವಾ ಕೊರೆಯುವ ಐಸ್ ಕ್ರೀಮ್‌ಗಳಿಂದ ಬೇಗನೆ ಬದಲಾಗುವುದು. ಅತಿಯಾದ ಆತಂಕ, ಆವೇಗ, ಉದ್ವೇಗ-ಇತ್ಯಾದಿ ಕಾರಣಗಳಿಂದ ಉಂಟಾಗಬಹುದು.

**ದೀರ್ಘಕಾಲಿಕ ಬಿಕ್ಕಳಿಕೆಗೆ ಕಾರಣಗಳು:** ಮನೋವೈಜ್ಞಾನಿಕ ಕಾರಣಗಳು, ವ್ಯಕ್ತಿತ್ವ ಬದಲಾವಣೆಗಳು., ಆಘಾತ, ಹೆದರಿಕೆ. ಕೇಂದ್ರ ನರ ವ್ಯವಸ್ಥೆಯಲ್ಲಿನ ತೊಂದರೆಗಳು. ಜನ್ಮದತ್ತ ದೋಷಗಳು, ಕ್ಯಾನ್ಸರ್‌ಗಳು, ಮಿದುಳಿನ ಮಲ್ಟಿಪಲ್ ಸ್ಕ್ಲಿರೋಸಿಸ್, ಮಿದುಳು ಪೊರೆಗಳ ಉರಿಯೂತ, ಮಿದುಳಿನ ಸೋಂಕು, ಇತರ ಸೋಂಕುಗಳು, ನರಗಳಿಗೆ ಹಾನಿ, ನರಗಳ ಕೆರಳಿಕೆ, ವಪೆಗೆ ಶಕ್ತಿ ನೀಡುವ ಫ್ರೇನಿಕ್ ನರಕ್ಕೆ ಉಂಟಾಗುವ ಹಾನಿ. ಫ್ರೆನಿಕ್ ನರ ಮತ್ತು 12 ಶಿರೋನರಗಳ ಪೈಕಿ ಅತಿ ಉದ್ದ ನರವಾದ ವೇಗಸ್ ನರ ಇವುಗಳ ಏರುಪೇರೂ ಬಿಕ್ಕಳಿಕೆಗೆ ಕಾರಣವಾಗುತ್ತದೆ, ವಪೆಯ ಮೂಲಕ ಉಂಟಾಗುವ ಹಯೇಟಸ್ ಹರ್ನಿಯಾ, ಹೃದಯಾಘಾತ, ಹೃದಯದ ಕವಚ-ಪೆರಿಕಾರ್ಡಿಯಮ್ ನ ಉರಿಯೂತ. ವಪೆ ಹಾಗೂ ಲಿವರ್, ಸ್ಪ್ಲೀನ್‌ಗಳ ನಡುವೆ ಕೆಟ್ಟ ನೀರು. ಕೀವು ಸೇರುವುದು, ಶ್ವಾಸಕೋಶದ ಪೊರೆಯ ಸೋಂಕು, ನ್ಯುಮೋನಿಯಾ, ಗ್ಲಾಕೋಮ, ಕಿವಿಯೊಳಗೆ ಪರಕೀಯ ವಸ್ತು ಸೇರುವುದು, ಗಂಟಲು, ಅನ್ನನಾಳಗಳ ಉರಿಯೂತ.

ಹುಳಿ ತೇಗು, ಜಠರದ ಹುಣ್ಣು, ಚಯಾಪಚಯದ (ಮೆಟಬೋಲಿಸಮ್) ಏರು-ಪೇರು-ಸೋಡಿಯಮ್, ಪೊಟ್ಯಾಷಿಯಮ್, ಕ್ಯಾಲ್ಸಿಯಮ್, ಗ್ಲುಕೋಸ್ ಮುಂತಾದವುಗಳ ರಕ್ತದ ಮಟ್ಟದಲ್ಲಿ ಇಳಿತ, ಶಮನಕಾರಕಗಳು, ಅಪಸ್ಮಾರದಲ್ಲಿ ಬಳಸುವ ಔಷಧೀಯ ಹಲವು ಅಂಶಗಳಲ್ಲಿ ಕೆಲವು ಬಿಕ್ಕಳಿಕೆಯನ್ನುಂಟು ಮಾಡುತ್ತವೆ. ಚಾರ್ಲ್ಸ್ ಓಸ್ ಬೋರ್ನ್ ಎಂಬ ಅಮೆರಿಕದ ಪ್ರಜೆ, ಅತೀ ದೀರ್ಘಕಾಲ ಬಿಕ್ಕಳಿಸಿದ ದಾಖಲೆ ಹೊಂದಿದ್ದಾನೆ. ಆತ 1922ರಿಂದ 1990ರವರೆಗೆ ಸತತ 68 ವರ್ಷಗಳ ಕಾಲ ಬಿಕ್ಕಳಿಸಿದ್ದ. ಗರ್ಭಸ್ಥ ಶಿಶುವಿನಲ್ಲೂ ಬಿಕ್ಕಳಿಕೆ ಬೆಳಕಿಗೆ ಬಂದಿದೆ. 1899ರಲ್ಲಿ ಆಗಷ್ಟೇ ಅಲ್ಟ್ರಾಸೌಂಡ್ ಮೆಷೀನ್ ಸಂಶೋಧಿಸಲ್ಪಟ್ಟಿದ್ದು, ಅದರ ಮೂಲಕ ಶಿಶುವಿನ ಬಿಕ್ಕಳಿಕೆ ಪತ್ತೆಯಾಗಿತ್ತು, ಬಿಕ್ಕಳಿಕೆಯು ಸಂಜೆ ವೇಳೆ ಬರುವುದು ಜಾಸ್ತಿ.

ಚಿಕಿತ್ಸೆ ಹೀಗೆ ಗಂಟಲನ್ನು ರಬ್ಬರ್ ನಳಿಕೆ ಮೂಲಕ ಪ್ರಚೋದಿಸುವುದು, ಕಿರುನಾಲಗೆಯನ್ನು (ಯುಮ್ಯಲಾ) ಚಮಚದಿಂದ ಪ್ರಚೋದಿಸುವುದು, ಹೊಟ್ಟೆಯಲ್ಲಿ ತುಂಬಿರುವ ಆಹಾರ, ಹುಳಿ ದ್ರವಗಳನ್ನೂ ನೇಸೋಗ್ಯಾಸ್ಟ್ರಿಕ್ ನಳಿಗೆಯಿಂದ (ರೈಲ್ಸ್ ಟ್ಯೂಬ್-ಜನರ ಬಾಯಲ್ಲಿ ರೈಸ್ ಟ್ಯೂಬ್ ಆಗಿದೆ; ಅದರ ಮೂಲಕ ಗಂಜಿ ಕುಡಿಸುತ್ತೇವಲ್ಲ ಆದ್ದರಿಂದ) ಹೀರಿ ತೆಗೆಯುವುದು, ವಾಂತಿ ಮಾಡಿಸುವುದು. ಹಿಪ್ನೋಸಿಸ್ -ವಶೀಕರಣದ ಮೂಲಕ ಗಮನವನ್ನು ಬದಲಾಯಿಸುವುದು.

ಆಕ್ಯುಪ್ರೆಷರ್ ಇತ್ಯಾದಿಗಳನ್ನು ಔಷಧಗಳಿಗಿಂತ ಮುಂಚಿತವಾಗಿ ಪ್ರಯತ್ನಿಸಬಹುದು. ಮಿದುಳಿನಲ್ಲಿ ಕೆಲಸ ಮಾಡುವ, ಸ್ನಾಯು ಸೆಳೆತ ನಿವಾರಕಗಳು, ಅರಿವಳಿಕೆ ಔಷಧಗಳು ಬಳಕೆಯಲ್ಲಿವೆ. ಬಿಕ್ಕಳಿಕೆಯ ಪರಾಕಾಷ್ಠೆಯಲ್ಲಿ ಫ್ರೆನಿಕ್ ನರವನ್ನು ತಾತ್ಕಾಲಿಕವಾಗಿ ಸ್ತಬ್ಧಗೊಳಿಸುವುದು. ವೇಗಸ್ ನರಕ್ಕೆ ಅಲ್ಪ ಪ್ರಮಾಣದ ವಿದ್ಯುತ್ ನೀಡುವ ಉಪಕರಣವನ್ನು ದೇಹದೊಳಕ್ಕೆ ಅಳವಡಿಸುವುದು ಮುಂತಾದ ಪ್ರಕ್ರಿಯೆಗಳು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಬಳಕೆಯಲ್ಲಿವೆ.

**ತಡೆಯುವುದು ಹೇಗೆ?:** ಹೊಟ್ಟೆ ಬಿರಿಯುವಂಥ ಊಟ ಬೇಡ, ತುಂಬಾ ಬಿಸಿ, ತುಂಬಾ ಖಾರದ ಆಹಾರ ಬೇಡ. ಮದಿರೆ ಮತ್ತು ಸಿದ್ದ ಪಾನೀಯಗಳು ನಿಯಂತ್ರಣದಲ್ಲಿರಲಿ, ವಾತಾವರಣದ ಉಷ್ಣತೆ ಏರಿಳಿಕೆ ತೀವ್ರವಾದಾಗ ಜಾಗರೂಕರಾಗಿರಿ,

**ಮನೆ ಮದ್ದು:** ಅಜ್ಜಿ ಹೇಳುತ್ತಿದ್ದ ಏಳು ಗುಟುಕು ತಣ್ಣೀರನ್ನು ಒಂದೊಂದಾಗಿ ಏಣಿಸಿ ಕುಡಿಯುವುದು, ಗುಟುಕರಿಸುವುದು. ಸಕ್ಕರೆ, ಬೆಲ್ಲವನ್ನು ತಿನ್ನುವುದು. ಫ್ರಿಜ್‌ನಲ್ಲಿಟ್ಟಿದ್ದ ತಣ್ಣನೆಯ ನೀರನ್ನು ಗುಟುಕರಿಸುವುದು. ಒಂದು ಪೇಪರ್‌ಬ್ಯಾಗ್‌ನಲ್ಲಿ ಮತ್ತೆ ಮತ್ತೆ ಉಸಿರಾಡುವುದು. ನಾಲಗೆಯನ್ನು ಬಲವಂತವಾಗಿ ಮುಂದಕ್ಕೆ ಎಳೆಯುವುದು. ಮೊಣಕಾಲುಗಳನ್ನು ಎದೆಗೆ ತಾಗುವಂತೆ ಮಡಚಿ ಕುಳಿತು, ಮುಂದಕ್ಕೆ ಬಗ್ಗುವುದು. 20-30 ಸೆಕೆಂಡುಗಳ ಕಾಲ ಉಸಿರು ಕಟ್ಟುವುದು

**- ಡಾ. ಸಿ. ಜಿ.** ಕೇಶವಮೂರ್ತಿ

# ಅಸುರಕ್ಷಿತ ಲೈಂಗಿಕ ಸಂಪರ್ಕವೇ ಹೆಚ್‌ಐವಿ ಗೆ ಕಾರಣ

## ಸಾಮಾನ್ಯ ಜನರಲ್ಲಿಯೇ ಏಡ್ಸ್ ಹೆಚ್ಚುತ್ತಿರುವುದು ಅಪಾಯಕಾರಿ ಬೆಳವಣಿಗೆ | ಚನ್ನರಾಯಪಟ್ಟಣದಲ್ಲಿ ಜನಜಾಗೃತಿ ಜಾಥಾ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಾಮಾನ್ಯ ಜನರಲ್ಲಿಯೇ ಹೆಚ್‌ಐವಿ ಸೋಂಕು ಕಾಣಿಸಿಕೊಳ್ಳುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ ಎಂದು ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕದ ಜಿಲ್ಲಾ ಮೇಲ್ವಿಚಾರಕ ರವಿಕುಮಾರ್ ಹೇಳಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಜಿಲ್ಲಾ ಆರೋಗ್ಯ ಕೇಂದ್ರ, ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಹಾಗೂ ವೈದ್ಯ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕಾಲೇಜು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ದಿನ ಮತ್ತು ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸೋಂಕಿತರಿಗೆ ಅರಿವು ಮೂಡಿಸಬಹುದು. ಆದರೆ, ಸಾಮಾನ್ಯರಿಗೆ ಜಾಗೃತಿ ಮೂಡಿಸಲು ಸಾಧ್ಯವಿಲ್ಲ. ಜೀವನ ಶೈಲಿ ಬದಲಾಗಿದ್ದು ಜಾಗೃತಿ ಇಲ್ಲವೇ ಅರಿವು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಹಾಳಾಗಲು ಅಥವಾ ಬದುಕಲು ಅವಕಾಶ ಎಂಬುದು ನಮ್ಮ ಕೈಯಲ್ಲಿಯೇ ಇದೆ. ಅದನ್ನು ಆಯ್ಕೆ ಮಾಡಿಕೊಳ್ಳುವ ವಿವೇಚನೆ ನಮ್ಮಲ್ಲಿ ಇರಬೇಕು ಎಂದು ಅವರು ಎಚ್ಚರಿಸಿದರು.

ಹೊಸಬರಿಗೆ ಸೋಂಕು ಹರಡಲು ಹಳೆಯ ಸೋಂಕಿತರೆ ಕಾರಣ. ಪ್ರಸಕ್ತ ಸಾಲಿನಲ್ಲಿ ಭಾರತ 3 ನೇ ಸ್ಥಾನದಲ್ಲಿದ್ದರೆ ಕರ್ನಾಟಕ 8 ನೇ ಸ್ಥಾನದಲ್ಲಿದೆ. ಸೋಂಕು ಹರಡದಂತೆ ನಿಯಂತ್ರಿಸುವಲ್ಲಿ ಹಾಗೂ ಅರಿವು ಮೂಡಿಸುವುದು ಆರೋಗ್ಯ ಇಲಾಖೆಯ ಕೆಲಸವಷ್ಟೇ ಅಲ್ಲದೆ ಸಾರ್ವಜನಿಕರು ಭಾಗವಹಿಸುವಿಕೆ ಮುಖ್ಯವಾಗಲಿದೆ ಎಂದರು.



ಆಡಳಿತ ವೈದ್ಯಾಧಿಕಾರಿ ಡಾ. ಯುವರಾಜ್ ಅವರು ಮಾತನಾಡಿ, ಅವಿವಾಹಿತರಲ್ಲಿ ಎಚ್‌ಐವಿ ಸೋಂಕು ಕಾಣಿಸಿಕೊಳ್ಳುತ್ತಿರುವುದು ಅಪಾಯದ ಸಂಗತಿ. ಈ ಸೋಂಕಿಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲದ ಕಾರಣ ಅರಿವು ಮೂಡಿಸುವುದು ಹಾಗೂ ಅರಿವು ಪಡೆದುಕೊಳ್ಳುವುದು ಅತಿ ಮುಖ್ಯ. ಅಸುರಕ್ಷಿತ ಲೈಂಗಿಕ ಸಂಪರ್ಕವೇ ಮುಖ್ಯ ಕಾರಣವಾಗಿದ್ದು ಜಾಗೃತಿಗೊಳ್ಳುವ ಮೂಲಕ ಏಡ್ಸ್ ಮುಕ್ತ ದೇಶ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಹೆಚ್‌ಐವಿ ಅಂಟು ರೋಗವಲ್ಲ. ಆದರೆ, ಯುವ ಸಮುದಾಯವು ಎಚ್ಚೆತ್ತುಕೊಳ್ಳದ ಪರಿಣಾಮ ದಿನದಿಂದ ದಿನಕ್ಕೆ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಅರಿವು ಮೂಡಿಸಿದರೂ ಸಹ ಜಾಗೃತಿಗೊಳ್ಳದ ಪರಿಣಾಮವೇ ಸೋಂಕು ಹರಡಲು ಪ್ರಮುಖ ಕಾರಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.



ಎಚ್‌ಐವಿ ಎಂಬುದು ನಡವಳಿಕೆಯಿಂದ ಬರುವ ಕಾಯಿಲೆ. 18 ರಿಂದ 40 ವರ್ಷದ ವಯಮಿತಿಯ ಒಳಗಿನ ವ್ಯಕ್ತಿಗಳಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಶೇ.70 ರಷ್ಟು ಅವಿವಾಹಿತ ಯುವ ಜನತೆಯಲ್ಲಿ ಕಾಣಿಸಿಕೊಳ್ಳುತ್ತಿರುವುದು ಅಪಾಯದ ಮುನ್ಸೂಚನೆಯಾಗಿದೆ ಎಂದು ತಿಳಿಸಿದರು.

**ಜಾಗೃತಿ ಜಾಥಾ:** ಏಡ್ಸ್ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಜಾಥಾ ಕೈಗೊಂಡಿದ್ದು ಸರ್ಕಾರಿ ಆಸ್ಪತ್ರೆ ಆವರಣದಿಂದ ಪ್ರಾರಂಭಗೊಂಡು ಆಸ್ಪತ್ರೆ ವೃತ್ತ ಮಾರ್ಗವಾಗಿ ಕೆ.ಆರ್. ವೃತ್ತ, ನವೋದಯ ವೃತ್ತ, ಮೈಸೂರು ರಸ್ತೆ ಹಾಗೂ ಆಸ್ಪತ್ರೆ ರಸ್ತೆ ಮಾರ್ಗವಾಗಿ ಸಾಗಿತು. ವೈದ್ಯ ನರ್ಸಿಂಗ್ ಸ್ಕೂಲ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಘೋಷಣೆಗಳನ್ನು ಕೂಗುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷ ವೆಂಕಟೇಶ್, ನೋಡಲ್ ಅಧಿಕಾರಿ ಸಂತೋಷ್, ತಾಲ್ಲೂಕು ಆರೋಗ್ಯ ಅಧಿಕಾರಿ ತೇಜಸ್ವಿನಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅನಿತಾ, ದಂತ ತಜ್ಞ ಜಮೀರ್ ಅಹ್ಮದ್, ವೈದ್ಯ ನರ್ಸಿಂಗ್ ಸ್ಕೂಲ್ ಪ್ರಾಂಶುಪಾಲ ಅರುಣ್, ಡಾ. ಧರಣೇಶ್ ಹಾಜರಿದ್ದರು.

# ಸರ್ಕಾರದ ಖಜಾನೆ ಖಾಲಿಯಾಗಿದೆ; ಸಿದ್ದರಾಮಯ್ಯ ಡಮ್ಮಿ ಮುಖ್ಯಮಂತ್ರಿ

• ಪ್ರಜೋದಯ ವರದಿ

**ಚಾಮರಾಜನಗರ:** ಸರ್ಕಾರದ ಖಜಾನೆ ಖಾಲಿಯಾಗಿದೆ, ಸ್ಥಿರತೆ ಹೋಗಿದೆ. ಸಿದ್ದರಾಮಯ್ಯ ಡಮ್ಮಿ ಸಿಎಂ ಆಗಿದ್ದಾರೆಂದು ಕೇಂದ್ರ ಸಚಿವ ವಿ.ಸೋಮಣ್ಣ ಲೇವಡಿ ಮಾಡಿದ್ದಾರೆ.

ಚಾಮರಾಜನಗರದಲ್ಲಿ ವರದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ವಿ.ಸೋಮಣ್ಣ, ಸರ್ಕಾರದ ಹುಳುಕು ಮುಚ್ಚಿಕೊಳ್ಳಲು ಏನ್ ಬೇಕಾದರೂ ಮಾಡುತ್ತಾರೆ. ದೇಶ ಇದ್ರೆ, ನಾವು ದೇಶಕ್ಕಿಂತ ಯಾರೂ ದೊಡ್ಡವರಿಲ್ಲ ಈ ಬಗ್ಗೆ ಹಿಂದೆ ಸಲಹೆ ಸೂಚನೆ ಕೊಟ್ಟಿದ್ದೇನೆ. ನಾನು ಹೇಳಿದ್ದು ತಲೆಗೆ ಹೋಗುತ್ತಿಲ್ಲ ಮಕ್ಕಳ ಆಟ ಅಂತ ಅಂದುಕೊಂಡಿದ್ದಾರೆ ಎಂದು ಕಿಡಿಕಾರಿದ್ದಾರೆ.

ಬಳ್ಳಾರಿಯಲ್ಲಿ ಕಾಂಗ್ರೆಸ್ ಮಾಡಿದ ಪಾಪಗಳು ಎಲ್ಲರಿಗೂ ತಿಳಿದಿವೆ. ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು. ಮುಗ್ಧ ಜನರನ್ನು ಬಲಿಪಶುಗಳನ್ನಾಗಿ ಮಾಡಬಾರದು. ಬಳ್ಳಾರಿ ಪ್ರಕರಣದ ಆರೋಪಿಗಳ ವಿರುದ್ಧ



ಕಾನೂನು ಕ್ರಮ ಕೈಗೊಳ್ಳದಿದ್ದರೆ, ಮುಖ್ಯಮಂತ್ರಿ ಖಳನಾಯಕನಾಗುತ್ತಾರೆ ಎಂದು ಹೇಳಿದರು.

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸೋಮಣ್ಣ, ತಮ್ಮ ಸಚಿವ ಸ್ಥಾನವನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿ ಸ್ಥಾನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಮುನಿಯಪ್ಪ ಹೇಳುತ್ತಿದ್ದಾರೆ. ಮುನಿಯಪ್ಪ ಪ್ರಾಮಾಣಿಕವಾಗಿ ಮಾತನಾಡಲು ಕಲಿಯಬೇಕು ಎಂದು ಹೇಳಿದರಲ್ಲದೆ, ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದಲ್ಲಿ ಬದಲಾವಣೆ ಆಗುತ್ತದೆಯೇ ಎಂಬ ವರದಿಗಾರರ ಪ್ರಶ್ನೆಗೆ ಉತ್ತರಿಸದೆ ತೆರಳಿದರು.

# ಮೆಕ್ಕೆಜೋಳ ಖರೀದಿ: ರೈತರಿಗೆ ನೆರವಾಗದ ಪ್ರೋತ್ಸಾಹ ಧನ

» ಮೊದಲನೇ ಪುಟದಿಂದ

ಗುತ್ತದೆ. ಸರ್ಕಾರ ನೀಡುವ ಪ್ರೋತ್ಸಾಹ ಧನಕ್ಕೆ ಆಸೆಪಟ್ಟರೆ 100 ರೂ. ನಷ್ಟವಾಗುತ್ತದೆ. ಖಾಲಿ ಚೀಲ ಮತ್ತು ಗುಣಮಟ್ಟದ ನೆಪದಲ್ಲಿ ಕತ್ತರಿ ಹಾಕುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಮಾರುಕಟ್ಟೆಯಲ್ಲಿ ಪ್ರಸ್ತುತ 1,900 ರೂ. ಬೆಲೆ ಇದ್ದು, ಮಾರನೇ ದಿನ ಎಷ್ಟಿರುತ್ತದೆಂಬುದು ಗೊತ್ತಾಗುವುದಿಲ್ಲ.

**ವರ್ತಕರಿಗೆ ನಿರ್ದೇಶನವಿಲ್ಲ**

ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಮೆಕ್ಕೆಜೋಳ ಖರೀದಿಸುತ್ತಿರುವ ಸರ್ಕಾರ ಅನ್ನದಾತರಿಗೆ ನಿಯಮ ವಿಧಿಸಿದೆ ಹೊರತು ವರ್ತಕರಿಗೆ ಯಾವುದೇ ನಿರ್ದೇಶನ ನೀಡಿಲ್ಲ. ಮಾರುಕಟ್ಟೆ ತಲುಪಿದ ಸಮಯದಲ್ಲಿ ವರ್ತಕರು ಇರುತ್ತಾರೆ ಅಥವಾ ಇರುವುದಿಲ್ಲ. ವ್ಯಾಪಾರ ಇಲ್ಲದಿದ್ದರೆ ವರ್ತಕರು ಬರುವವರೆಗೆ ಕಾಯಬೇಕು. ಇಡೀ ದಿನ ವರ್ತಕರು ಬಾರದಿದ್ದರೆ ತಂದ ಸರಕನ್ನು ಬಾಡಿಗೆ ವಾಹನದಲ್ಲಿ ವಾಪಾಸ್ ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ.

# ಶಾಸಕ ಶಿವಲಿಂಗೇಗೌಡರ ಗರ್ವ ಭಂಗ ಖಚಿತ

» ಮೊದಲನೇ ಪುಟದಿಂದ

ದ್ರೋಹ ಬಗೆದಿದ್ದು ಶಿವಲಿಂಗೇಗೌಡ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

2028ರ ವಿಧಾನಸಭೆ ಚುನಾವಣೆಯಲ್ಲಿ ಸೋಲಿನ ಭಯ ಈಗಲೇ ಕಾಡುತ್ತಿದೆ. ಹೀಗಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡು ಮಾತನಾಡುತ್ತಿದ್ದಾರೆ. ನಗರದ ಪಿ.ಪಿ. ವೃತ್ತದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಹೆಚ್.ಡಿ.ರೇವಣ್ಣ ಕುರಿತು ವಿಷಕಾರಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ವಿರುದ್ಧ ಮಾತನಾಡಿದರೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗಬಹುದೆಂಬ ದುರಾಸೆ ಅವರಿಗಿದೆ. ಯಾವ ಕಾರಣಕ್ಕೂ ನೀವು ಮಂತ್ರಿಯಾಗುವುದಿಲ್ಲವೆಂದು ವ್ಯಂಗ್ಯವಾಡಿದರು.

**ಬಿಳಿಚೌಡಯ್ಯರಿಗೆ ಮೋಸ ಮಾಡಿದಿರಿ**

ಬಿಳಿಚೌಡಯ್ಯನವರಿಗೆ ಪರಿಷತ್ ಸ್ಥಾನ ನೀಡಲಿಲ್ಲವೆಂದು ಜೆಡಿಎಸ್ ತೊರೆದೆನೆಂದು ಹೇಳುತ್ತೀರಿ. ಅವರಿಗೆ ಸೂಕ್ತ ಹುದ್ದೆ ನೀಡುವ ಉದ್ದೇಶದಿಂದಲೇ ಬೆಂಗಳೂರಿನ ನಿವಾಸಕ್ಕೆ ಮಾಜಿ ಪ್ರಧಾನಿ ದೇವೇಗೌಡರು ನಿಮ್ಮನ್ನು ಆಹ್ವಾನಿಸಿದ್ದರು. ಎರಡು ಗಂಟೆ ಕಾದು ಕುಳಿತರೂ ಬರಲಿಲ್ಲ. ಆಗಲೇ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಬೇಕೆಂದು ಬಯಸಿದ್ದು ಯಾರೆಂಬುದು ಅರ್ಥವಾಯಿತು. ಪ್ರತಿ ಭಾಷಣದಲ್ಲಿ ಅಹಿಂದ ಕುರಿತು ಮೃದುವಾಗಿ ಮಾತನಾಡುತ್ತೀರಿ. ಹಿಂದುಳಿದ ಸಮುದಾಯಕ್ಕೆ ಎಷ್ಟು ಕೊಡುಗೆ ನೀಡಿದ್ದೀರಿ. ಪಟೇಲ್ ಶಿವಪ್ಪ ಅವರಿಗೆ ಹುಡಾ ಅಧ್ಯಕ್ಷ ಸ್ಥಾನ ತಪ್ಪಿಸಲು ಎಷ್ಟು ಪ್ರಯತ್ನ ನಡೆಸಿದ್ದರೆಂಬುದು ತಾಲ್ಲೂಕಿನ ಜನರಿಗೆ ಗೊತ್ತು. ಶಿವಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರಾಗಿರುವುದರಿಂದ ಹೇಗೋ ಅಧಿಕಾರ ಸಿಕ್ಕಿದೆ. ನಿಮ್ಮನ್ನು ನಂಬಿದರೆ ಏನೂ ಆಗುವುದಿಲ್ಲವೆಂದು ವಾಗ್ದಾಳಿ ನಡೆಸಿದರು.

**ಅರಸೀಕೆರೆ ಜೆಡಿಎಸ್ ಕ್ಷೇತ್ರ**

2008ರಲ್ಲಿ ಜೆಡಿಎಸ್‌ನಿಂದ ಟಿಕೆಟ್ ಕೇಳುವವರು ಯಾರೂ ಇರಲಿಲ್ಲ ಎಂದಿದ್ದೀರಿ. 1994ರಲ್ಲಿ ಪರಮೇಶ್ವರಪ್ಪ, ನಂತರ ಗಂಗಾಧರಪ್ಪ ಜೆಡಿಎಸ್‌ನಿಂದಲೇ ಗೆದ್ದಿದ್ದರೆಂಬುದನ್ನು ಮರೆಯಬಾರದು. ಅರಸೀಕೆರೆ ಯಾವತ್ತಿಗೂ ಜೆಡಿಎಸ್ ಭದ್ರಕೋಟೆ. 2019ರ ಲೋಕಸಭಾ ಚುನಾವಣೆಯಲ್ಲಿ ಮಾಜಿ ಸಂಸದ ಪ್ರಜ್ವಲ್‌ಗೆ 85 ಸಾವಿರ ಮತ ಬಂದಿದ್ದವು. 2024ರಲ್ಲಿ 84 ಸಾವಿರ ಮತಗಳು ಜೆಡಿಎಸ್‌ಗೆ ದೊರೆತಿವೆ. ನೀವು ಪಕ್ಷ ತೊರೆದರೂ ಜೆಡಿಎಸ್ ಮತಗಳು ಬದಲಾ ಗಿಲ್ಲ. ನಿಮ್ಮ ಯಾವ ಮಾತನ್ನು ಜನರು ನಂಬುವುದಿಲ್ಲವೆಂದು ತಿರುಗೇಟು ನೀಡಿದರು.

ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷ

> **2023ರ ಚುನಾವಣೆಯಲ್ಲಿ ಎನ್.ಆರ್.ಸಂತೋಷ್ ಬದಲು ಬೇರೆ ಯಾರಿಗಾದರೂ ಟಿಕೆಟ್ ಕೊಟ್ಟಿದ್ದರೆ ಶಿವಲಿಂಗೇಗೌಡರು ಸೋಲುತ್ತಿದ್ದರು. 2028ರ ಚುನಾವಣೆಯನ್ನು ಜೆಡಿಎಸ್ ಪ್ರತಿಷ್ಠೆಯಾಗಿ ಪರಿಗಣಿಸಿದ್ದು, ಸಾಮಾನ್ಯ ಕಾರ್ಯಕರ್ತ ಸ್ಪರ್ಧಿಸಿದರೂ ಗೆಲ್ಲಿಸಿಕೊಳ್ಳುತ್ತೇವೆ. ಕಾಂಗ್ರೆಸ್ ಮುಕ್ತ ಜಿಲ್ಲೆ ಮಾಡುವುದೇ ನಮ್ಮ ಗುರಿ.**
> **-ಬಾಣಾವರ ಅಶೋಕ್, ಜೆಡಿಎಸ್ ಮುಖಂಡ**

ಗಿರೀಶ್ ಅವರು ಮಾತನಾಡಿ, 2007ರಲ್ಲಿ ನಗರದ ತಮ್ಮಯ್ಯ ಶೆಟ್ಟಿ ಅವರ ಮನೆಗೆ ಹೆಚ್. ಡಿ.ರೇವಣ್ಣ ಅವರು ಬಂದಿದ್ದಾಗ ಶಿವಲಿಂಗೇಗೌಡ ಕಾಲಿಗೆ ಬಿದ್ದು ಆಶೀರ್ವಾದ ಪಡೆದಿದ್ದರು. ಇತಿಹಾಸ ಮರೆತು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅಧಿಕಾರ ಯಾರಿಗೂ ಶಾಶ್ವತವಲ್ಲ, ಗೌರವ, ಸಂಯಮ ಹಾಗು ಮಾನವೀಯತೆ ಗುಣಗಳನ್ನು ಮನುಷ್ಯ ಅಳವಡಿಸಿಕೊಳ್ಳಬೇಕು. ಕೃತಜ್ಞತೆ ಇಲ್ಲದ ಶಾಸಕರಿಗೆ 2028ರ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆಂದರು.

ಜೆಡಿಎಸ್ ಮುಖಂಡರಾದ ಶೇಖರಪ್ಪ, ಹೊಸೂರು ಗಂಗಣ್ಣ, ಗಂಡಸಿ ಮಾಯಣ್ಣ, ಕೆಂಕೆರೆ ಕೇಶವ, ಹರ್ಷವರ್ಧನ್ ಇದ್ದರು.

# ಜ.16 ರಂದು ಸಚಿವರ ಜನ ಸ್ಪಂದನಾ ಸಭೆ



» ಮೊದಲನೇ ಪುಟದಿಂದ

ಕ್ರಮದಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಅರ್ಜಿದಾರರು ಮೊದಲಿಗೆ ನೋಂದಣಿ ಮಾಡಿಕೊಳ್ಳಬೇಕು. ನಂತರ ಒಬ್ಬೊಬ್ಬರನ್ನೇ ವೇದಿಕೆಗೆ ಕರೆದು ಅಹವಾಲು ದಾಖಲಿಸಲು ಅವಕಾಶ ನೀಡಲಾಗುವುದು. ಚನ್ನರಾಯಪಟ್ಟಣದಲ್ಲಿ ಜನಸ್ಪಂದನಾ ಕಾರ್ಯಕ್ರಮ ನಡೆದಾಗ 1,200ಕ್ಕೂ ಹೆಚ್ಚು ಅರ್ಜಿಗಳು ಸ್ವೀಕಾರವಾಗಿದ್ದು, ಇಲ್ಲೂ ಸಹ ಹೆಚ್ಚು ಅರ್ಜಿಗಳು ಬರುವ ನಿರೀಕ್ಷೆ ಇದೆ. ಕಾಡಾನೆ ಸಮಸ್ಯೆ ಪರಿಹಾರಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಲವು ಯೋಜನೆ ರೂಪಿಸಿದ್ದಾರೆ. ಆನೆಧಾಮ ನಿರ್ಮಾಣಕ್ಕೆ ಸ್ಥಳ ಹುಡುಕುವ ಪ್ರಯತ್ನ ನಡೆಯುತ್ತಿದೆ ಎಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ಕಂದಾಯ ಇಲಾಖೆ ವ್ಯಾಪ್ತಿಯ ಸಮಸ್ಯೆಗಳು ಹೆಚ್ಚಿದ್ದು, ಕಂದಾಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಖುದ್ದು ಸ್ಥಳಕ್ಕೆ ಬಂದು ಸಮಸ್ಯೆಗಳನ್ನು ಆಲಿಸಬೇಕೆಂದು ಮನವಿ ಮಾಡಿದ್ದೆ, ಆ ನಿಟ್ಟಿನಲ್ಲಿ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಜನಸ್ಪಂದನಾ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಸೇರಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಕಲೇಶಪುರ, ಆಲೂರು, ಕಟ್ಟಾಯ ತಹಶೀಲ್ದಾರ್‌ಗಳು ಹಾಗೂ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿರುವರು ಎಂದರು. ಈ ವೇಳೆ ಉಪವಿಭಾಗಾಧಿಕಾರಿ ಮಂಜುನಾಥ್, ತಹಶೀಲ್ದಾರ್ ಸುಪ್ರೀತಾ, ವಲಯ ಅರಣ್ಯಾಧಿಕಾರಿ ಹೇಮಂತ್ ಹಲವರಿದ್ದರು.

# ಸ್ಥಳೀಯ ಸಂಸ್ಥೆ ಚುನಾವಣೆಗೆ ಸರ್ಕಾರ ಸಿದ್ಧ: ಸಿ.ಎಂ.



» ಮೊದಲನೇ ಪುಟದಿಂದ

ಆದರೆ, ಅವರೊಂದಿಗೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲವೆಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.


ಪಕ್ಷದಲ್ಲಿ ಅಧಿಕಾರ ಹಂಚಿಕೆಯ ಬಗ್ಗೆ ಗೊಂದಲಕ್ಕೆ ಉತ್ತರಿಸಿದ ಅವರು, ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಇದೆಲ್ಲಾ ಮಾಧ್ಯಮಗಳ ಸೃಷ್ಟಿ. ಪಕ್ಷದ ಶಾಸಕರೇ ಈ ಬಗ್ಗೆ ಮಾತನಾಡುತ್ತಿರುವ ಬಗ್ಗೆ ತಿಳಿದಿಲ್ಲ. ನಾನು ಅಥವಾ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಾತನಾಡಬೇಕು. ಅಧಿಕಾರ ಹಂಚಿಕೆ ವಿಚಾರದಲ್ಲಿ ಅಂತಿಮವಾಗಿ ಪಕ್ಷದ ವರಿಷ್ಠರ ತೀರ್ಮಾನದಂತೆ ನಡೆದುಕೊಳ್ಳಲಾಗುವುದು.

# ವಿಶೇಷ ತರಬೇತಿ ಕಾರ್ಯಾಗಾರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಪತ್ರ ಬರಹಗಾರರಿಗೆ ಹಾಗೂ ಸ್ಟ್ಯಾಂಪ್ ವಿತರಕಾ ಮಾಲೀಕರಿಗೆ, ಸಿಎಸ್ಸಿ, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುವವರಿಗೆ ಮತ್ತು ಸಾರ್ವಜನಿಕರಿಗೆ ಕಾವೇರಿ-2 ತಂತ್ರಾಂಶದ ಮೂಲಕ ಡಿಜಿಟಲ್ ಇ- ಸ್ಟ್ಯಾಂಪ್ ಪಡೆಯುವುದು ಹೇಗೆ ಹಾಗೂ ಇ-ಸ್ಟ್ಯಾಂಪ್ ಪಡೆಯುವ ವೇಳೆಯಲ್ಲಿ ಅನುಸರಿಸಬೇಕಾದ ವಿಷಯಗಳ ಬಗ್ಗೆ ಕುರಿತು ವಿಶೇಷ ತರಬೇತಿ ಕಾರ್ಯಾ ಗಾರವನ್ನು ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ಇಂಜಿನಿಯರ್ ಕುಮಾರ್ ಮತ್ತು ಹರೀಶ್ ಕಾವೇರಿ 2.0 ತಂತ್ರಾಂಶದಲ್ಲಿ ಡಿಜಿಟಲ್



ಇ-ಸ್ಟ್ಯಾಂಪ್ ಪಡೆಯುವುದು ಹೇಗೆ ಎಂಬುದರ ಬಗ್ಗೆ ಪ್ರಾತ್ಯಕ್ಷಿತೆಯನ್ನು ಪ್ರಸ್ತುತಪಡಿಸಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದವರಿಗೆ ಸೂಕ್ತ ಮಾಹಿತಿಯನ್ನು ಒದಗಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಹಿರಿಯ ಉಪನೋಂದಣಾಧಿಕಾರಿ ಕೆ.ಆರ್.ನಾಗರಾಜು, ಕಚೇರಿ ಎಸ್ಡಿಎ ಎಮ್.ದೇವರಾಜು, ಇಂಜಿನಿಯರ್ ಕುಮಾರ್, ಇಂಜಿನಿಯರ್ ಹರೀಶ್ ನೌಕರರಾದ ಮಧು, ಸಂದೇಶ್, ಮಧುರ ಸೇರಿದಂತೆ ಪತ್ರಬರಹಗಾರರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ರೇರ್ ಅರ್ಥ್ ಮ್ಯಾಗ್ನೆಟ್ಸ್ ಯೋಜನೆಗೆ 7,280 ಕೋ. ರೂ.

• ಪ್ರಜೋದಯ ವರದಿ

**ನವದೆಹಲಿ:** ಭೂಮಿಯಲ್ಲಿನ ಅಪರೂಪದ ಮ್ಯಾಗ್ನೆಟ್‌ಗಳ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು, ಯೋಜನೆಯ ಉದ್ಯಮ ಪಾಲುದಾರರ ಮಹತ್ವದ ಸಭೆಯನ್ನು ನಡೆಸಿದರು.

ಬೃಹತ್ ಕೈಗಾರಿಕೆ ಸಚಿವಾಲಯದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಭಾರೀ ಕೈಗಾರಿಕೆಗಳ ಸಚಿವಾಲಯದ ಕಾರ್ಯದರ್ಶಿ, ಪರಮಾಣು ಇಂಧನ ಇಲಾಖೆಯ ಕಾರ್ಯದರ್ಶಿ, ಸಿಎಮ್‌ಡಿ, ಐಆರ್‌ಇಎಲ್ (ಭಾರತ) ಲಿಮಿಟೆಡ್‌ನ ನಿರ್ದೇಶಕರು (ತಾಂತ್ರಿಕ), ಎನ್‌ಎಂಡಿಸಿ ನಿರ್ದೇಶಕರು, ಎನ್



ಎಫ್‌ಟಿಡಿಸಿ ಮತ್ತು ಭಾರತ ಮತ್ತು ವಿದೇಶಗಳ ವಿವಿಧ ಉದ್ಯಮ ಪಾಲುದಾರರು ಭಾಗವಹಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಈಗಾಗಲೇ ಯೋಜನೆಯನ್ನು ಘೋಷಣೆ ಮಾಡಲಾಗಿದ್ದು; 2047ಕ್ಕೆ ವಿಕಸಿತ ಭಾರತ ಸಾಕಾರಕ್ಕಾಗಿ ವೇಗಗತಿಯಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಅದಕ್ಕೆ ಅನುಗುಣವಾಗಿ, ಆರ್‌ಇಪಿಎಂಗಳಿಗಾಗಿ ಸ್ವಾವಲಂಬಿ, ಸ್ಥಿತಿಸ್ಥಾಪಕ ಮತ್ತು ಜಾಗತಿಕವಾಗಿ ಸ್ಪರ್ಧಾತ್ಮಕ ಪೂರಕ ವ್ಯವಸ್ಥೆಯನ್ನು ಸ್ಥಾಪಿಸುವತ್ತ ಕೇಂದ್ರ ಸರಕಾರ ಕ್ಷಿಪ್ರಗತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಸಚಿವ ಕುಮಾರಸ್ವಾಮಿ ಅವರು ಹೇಳಿದರು.

ಎಲ್ಲಾ ಅರ್ಹ ದೇಶೀಯ ಮತ್ತು ಅಂತಾರಾಷ್ಟ್ರೀಯ ಪಾಲುದಾರರು ಈ ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಮತ್ತು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ಭಾರತದ ದೀರ್ಘಕಾಲೀನ ಬೆಳವಣಿಗೆಗೆ ಕೊಡುಗೆ ನೀಡಬೇಕೆಂದು ಸಚಿವ ಹೆಚ್.ಡಿ. ಕುಮಾರಸ್ವಾಮಿ ಒತ್ತಿ ಹೇಳಿದರು. ಡಿಸೆಂಬರ್ 15, 2025ರಂದು ಈ ಯೋಜನೆಯ ಅಧಿಸೂಚನೆ ಹೊರಡಿಸಲಾಗಿದ್ದು, ಆ ಯೋಜನೆ ಪ್ರಮುಖ ಉದ್ದೇಶ, ಗುರಿಗಳನ್ನು ಸಚಿವರು ಪಾಲುದಾರರಿಗೆ ವಿವರಿಸಿದರು.

ನಾಮಧಾರಿ ಒಕ್ಕಲಿಗರಿಗೆ ಗುಡ್ ನ್ಯೂಸ್ ಕೊಟ್ಟ ಹೆಚ್.ಡಿ.ಕುಮಾರಸ್ವಾಮಿ, ಈ ಯೋಜನೆಯ ಒಟ್ಟು ಹಣಕಾಸು ವೆಚ್ಚವು 7,280 ಕೋಟಿ ರೂ.ಗಳಾಗಿದ್ದು, ಇದರಲ್ಲಿ ಯೋಜನೆಯ ಮಾರಾಟದ ಮೇಲಿನ ಮಾರಾಟ, ಸಂಬಂಧಿತ ಪ್ರೋತ್ಸಾಹಕಗಳಲ್ಲಿ 6,450 ಕೋಟಿ ರೂ. ಆಗಿದೆ. ವಾರ್ಷಿಕ ಒಟ್ಟು 6,000 ಮೆಟ್ರಿಕ್ ಟನ್ ಉತ್ಪಾದನೆ ಗುರಿ ಸಾಧಿಸಲು 750 ಕೋಟಿ ರೂ.ಗಳ ಬಂಡವಾಳ ಸಬ್ಸಿಡಿಯೂ ಒಟ್ಟು ಮೊತ್ತದಲ್ಲಿ ಸೇರಿದೆ ಎಂದು ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರು ಮಾಹಿತಿ ನೀಡಿದರು. 2 ಅಪರೂಪದ ಮ್ಯಾಗ್ನೆಟ್ಸ್ ಗಳ ಉತ್ಪಾದನೆ ಮತ್ತು ಬಳಕೆಯಲ್ಲಿ ಭಾರತವು ಸ್ವಾವಲಂಬನೆ ಸಾಧಿಸಬೇಕು ಹಾಗೂ ಜಾಗತಿಕ ಮಟ್ಟದಲ್ಲಿ ಪ್ರಮುಖ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮಬೇಕು. ಈ ಯೋಜನೆಯು 7 ವರ್ಷಗಳ ಅವಧಿ ಹೊಂದಿದ್ದು, ಇದರಲ್ಲಿ ಸಮಗ್ರ ಉತ್ಪಾದನಾ ಸೌಲಭ್ಯಗಳನ್ನು ಸ್ಥಾಪಿಸಲು ಎರಡು ವರ್ಷಗಳ ಅವಧಿ ಮತ್ತು ಮಾರಾಟದ ಮೇಲಿನ ಪ್ರೋತ್ಸಾಹಕ ವಿತರಣೆಗೆ ಐದು ವರ್ಷಗಳ ಅವಧಿ ಇದೆ ಎಂದು ಸಚಿವ ಕುಮಾರಸ್ವಾಮಿ ಹೇಳಿದರು.

# ದೇವಾಲಯದಲ್ಲಿ ಹುಂಡಿ ಹಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಬಾಗಿಲು ಮುರಿದು ಒಳ ನುಗ್ಗಿರುವ ಕಳ್ಳರು ಹುಂಡಿ ಒಡೆದು ನಗದು ಕದ್ದಿರುವ ಘಟನೆ ತಾಲ್ಲೂಕಿನ ಮಾದನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಹರಿಹರೇಶ್ವರ ಹಾಗೂ ರಾಮ- ಲಕ್ಷ್ಮಣ ದೇವಾಲಯದಲ್ಲಿ ಕಳ್ಳತನವಾಗಿದೆ. ಅರ್ಚಕ ಉಮಾಮಹೇಶ್ವರಿ ಅವರು ಜ. 11ರಂದು ಪೂಜೆ ಮುಗಿಸಿ ಬಾಗಿಲು ಹಾಕಿ ಮನೆಗೆ ತೆರಳಿದ್ದರು. ಮಾರನೇ ದಿನ ಬೆಳಿಗ್ಗೆ 5 ಗಂಟೆಗೆ ದೇವಸ್ಥಾನದ ಬಳಿ ಹೋದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಹುಂಡಿ ಒಡೆದಿರುವ ಕಳ್ಳರು ಅಂದಾಜು 3 ಸಾವಿರ ರೂ. ನಗದು ಕದ್ದಿದ್ದಾರೆ.

ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅರಸೀಕೆರೆಯಲ್ಲಿ ಬಾಲಗಂಗಾಧರನಾಥ ಶ್ರೀಗಳ ಪುಣ್ಯಾರಾಧನೆ

## ಆಧ್ಯಾತ್ಮಿಕದ ಜೊತೆಗೆ ಹಲವು ಕ್ಷೇತ್ರಗಳ ಮೂಲಕ ಸಮಾಜಕ್ಕೆ ನೀಡಿದ ಶ್ರೀಗಳ ಕೊಡುಗೆ ಅಪಾರ

• ಪ್ರಜೋದಯ ವರದಿ

**ಅರಸೀಕೆರೆ:** ಭೈರವೈಕ್ಯ ಡಾ.ಬಾಲಗಂಗಾಧರನಾಥ ಶ್ರೀಗಳ 13ನೇ ವರ್ಷದ ಪುಣ್ಯಾರಾಧನಾ ಮಹೋತ್ಸವವನ್ನು ತಾಲ್ಲೂಕು ಒಕ್ಕಲಿಗರ ಸಂಘ ಹಾಗೂ ಭೈರವ ಯುವಕ ಸಂಘದ ವತಿಯಿಂದ ಆಯೋಜಿಸುವುದರೊಂದಿಗೆ ಗುರು ನಮನ ಸಲ್ಲಿಸಲಾಯಿತು.

ನಗರದ ಪಿ.ಪಿ. ವೃತ್ತದಲ್ಲಿ ಆಯೋಜಿಸಿದ್ದ ಪುಣ್ಯಾರಾಧನೆಯಲ್ಲಿ ತಾಲ್ಲೂಕು ಒಕ್ಕಲಿಗರ ಸಮಾಜದ ಅಧ್ಯಕ್ಷ ಆರ್.ಅನಂತಕುಮಾರ್ ಸೇರಿ ನಾನಾ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಂಘ- ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಒಕ್ಕಲಿಗ



ಸಮಾಜ ಮತ್ತು ಭೈರವ ಯುವಕ ಸಂಘದ ಮುಖಂಡರು ಪಾಲ್ಗೊಂಡು ನೆಚ್ಚಿನ ಗುರುಗಳಿಗೆ ಗುರು ಭಕ್ತಿಯನ್ನು ಸಮರ್ಪಿಸಿದರು.

ಆರ್.ಅನಂತಕುಮಾರ್ ಮಾತನಾಡಿ, ಮಹಾನ್ ತಪಸ್ವಿಗಳಾಗಿದ್ದ ಬಾಲಗಂಗಾಧರನಾಥ ಶ್ರೀಗಳು ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಬಳಿಕ ಚುಂಚನಗಿರಿ ಯನ್ನು ಚಿನ್ನದ ಗಿರಿಯನ್ನಾಗಿಸಿದರು. ಆಧ್ಯಾತ್ಮಿಕದ ಜೊತೆಗೆ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ, ಪರಿಸರ ಹೀಗೆ ಹಲವು ಕ್ಷೇತ್ರಗಳ ಮೂಲಕ ಸಮಾಜಕ್ಕೆ ನೀಡಿದ ಅವರ ಕೊಡುಗೆ ಅಪಾರವಾಗಿದೆ. ಅಂತಹ ಮಹಾನ್ ತಪಸ್ವಿಯನ್ನು ಕಣ್ಣಾರೆ ಕಂಡ ನಾವೇ ಭಾಗ್ಯವಂತರು ಎಂದು ತಮ್ಮ ನುಡಿ ನಮನ ಸಲ್ಲಿಸಿದರು.

ಒಕ್ಕಲಿಗ ಸಮಾಜದ ಮುಖಂಡ ಗುಂಡಣ್ಣ ಅವರು ಮಾತನಾಡಿ, ಅಸಂಘಟಿತವಾಗಿದ್ದ ಒಕ್ಕಲಿಗ ಸಮಾಜವನ್ನು ಒಗ್ಗೂಡಿಸುವ ಜೊತೆಗೆ ಇತರೆ ಸಮಾಜಗಳ ಒಳಿತನ್ನು ಬಯಸುವ ವಿಶಾಲ ಮನೋಭಾವ ಧರನಾಥ ಶ್ರೀಗಳದ್ದಾಗಿತ್ತು. ಹಾಗಾಗಿ ಅವರನ್ನು ಜಾತಿ ಮತ ಮೀರಿದ ಸಂತ ಎಂದು ಸರ್ವರಿಂದಲೂ ಕರಸಿಕೊಂಡ ಯುಗ ಪುರುಷರು ನಮ್ಮ ಬಾಲ ಗಂಗಾಧರನಾಥ ಶ್ರೀಗಳು ಎಂದರು.

ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ನಿವೃತ್ತ ಪೌರಾಯುಕ್ತ ಪರಮೇಶ್, ಒಕ್ಕಲಿಗ ಸಮಾಜದ ಮುಖಂಡರಾದ ಧರ್ಮೇಶ್, ಹೇಮಂತ್ ಕುಮಾರ್, ಹೈಟೆಕ್ ಕುಮಾರ್, ಕರವೇ ನಗರ ಅಧ್ಯಕ್ಷ ಕಿರಣ್ ಕುಮಾರ್, ನಗರಸಭೆ ನಿಕಟ ಪೂರ್ವ ಸದಸ್ಯರಾದ ವೆಂಕಟಮುನಿ, ದರ್ಶನ್ ಇತರರು ಉಪಸ್ಥಿತರಿದ್ದರು.

# ಲಲಿತ್ ರಾಘವ್ ದೀಪುಗೆ ಸನ್ಮಾನ



**ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆಯಲ್ಲಿ ಸವಿತಾ ಮಂಗಳವಾದ್ಯ ಕಲಾ ಸಂಘದ ವತಿಯಿಂದ ಆಚರಿಸುತ್ತಿರುವ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವದಲ್ಲಿ ಕರ್ನಾಟಕ ವಿದ್ಯುತ್ ಕಾರ್ಖಾನೆ ಅಧ್ಯಕ್ಷರು ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಲಲಿತ್ ರಾಘವ್ ದೀಪು ಅವರನ್ನು ಸವಿತಾ ಸಮಾಜದ ವತಿಯಿಂದ ಸನ್ಮಾನಿಸಲಾಯಿತು.**

# ಕೋರೆಂಗಾವ್ ವಿಜಯೋತ್ಸವಕ್ಕೆ ಅಂಬೇಡ್ಕರ್ ಮೊಮ್ಮಗ

• ಪ್ರಜೋದಯ ವರದಿ

**ಹೊಳೆನರಸೀಪುರ:** ಕೋರೆಂಗಾವ್‌ನ ಯದ್ಧದಲ್ಲಿ ವೀರಾವೇಶ ತೋರಿದ ದಲಿತರ ಪರಾಕ್ರಮವನ್ನು ಅಂದಿನ ಬ್ರಿಟನ್ ರಾಣಿ ಗೌರವಿಸಿದರೂ, ನಮ್ಮ ಇತಿಹಾಸದ ಪುಟದಲ್ಲಿ ದಾಖಲಾಗಿಲ್ಲದಿರುವುದು ಶೋಚನೀಯ ಎಂದು ಕೋರೆಂಗಾವ್ ವಿಜಯೋತ್ಸವ ಆಚರಣಾ ಸಮಿತಿ ಅಧ್ಯಕ್ಷ ಎಚ್.ಕೆ. ಸಂದೇಶ್ ತಿಳಿಸಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನದಲ್ಲಿ ಜ.20 ರ ಮಂಗಳವಾರದಂದು ವಿಜಯೋತ್ಸವ ಆಚರಿಸಲಾಗುತ್ತಿದೆ. ಅಂಬೇಡ್ಕರ್‌ರ ಮೊಮ್ಮಗ ಭೀಮ ರಾವ್ ಅಂಬೇಡ್ಕರ್ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಇದು ಹೆಗ್ಗಳಿಕೆಯ ವಿಚಾರವಾಗಿದೆ. ತಾಲ್ಲೂಕಿನಿಂದ ಹೆಚ್ಚಿನ ಜನರು ಭಾಗವಹಿಸುವಂತೆ



ಕೋರಿದ ಅವರು, ನಮ್ಮವರೆಂದು ಭ್ರಮಿಸಿದ ಮಹಾವೀರ ಸಿದ್ದನಾಯಕನನ್ನು ಅಸ್ಪ್ರುಶ್ಯತೆಯಿಂದ ಕಂಡ ಪೇಶ್ವೆಗಳನ್ನು ಸದೆ ಬಡೆದದ್ದು, ಇಂದಿಗೂ ಸ್ಮರಣೀಯವಾಗಿದೆ. 28 ಸಾವಿರ ಸೈನಿಕರನ್ನು ಕೇವಲ 500 ಮಹಾವೀರರು ಮಣಿಸಿದ್ದು, ಪರಾಕ್ರಮದ ಪ್ರತೀಕವಾಗಿದೆ. ಭೀಮಾ ತಟದ ಕೋರೆಂಗಾವ್ ಹೆಸರಿನಲ್ಲಿ ಮಹತ್ವ ಇದೆ ಎಂದರು.

ಸಂವಿಧಾನ ಓದು ರಾಜ್ಯ ಸಮಿತಿ ಸದಸ್ಯ ರಾಜು ಗೊರೂರು ಅವರು ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸ್ಥಂಭ ಶಾಸನದ ಬಳಿ ಸಮಾವೇಶ ನಡೆಸಿ ಕೋರೆಂಗಾವ್ ಸಮರ ವಿಜಯಿಗಳಿಗೆ ಗೌರವ ಸಲ್ಲಿಸಿದ್ದರು. ಬ್ರಿಟೀಷರು ಅಂದು ಕೋರೆಂಗಾವ್ ವಿಜಯಕ್ಕೆ ಬಳುವಳಿಯಾಗಿ ಇಂಗ್ಲೀಷ್ ಶಿಕ್ಷಣ ಕೊಡಲು ಮುಂದಾಗಿದ್ದು ಇತಿಹಾಸ ಎಂದರು.

ವೈದ್ಯ ಡಾ.ವೆಂಕಟೇಶಮೂರ್ತಿ, ಡಿಎಸ್‌ಎಸ್ ಹಿರಿಯ ಮುಖಂಡ ರಾಜಶೇಖರ್ ಹುಲಿಕಲ್ ಹಾಜರಿದ್ದರು.

# ಹಾಸನಕ್ಕೆ 'ಗಮಕ ಸಿಂಹಾಸನಪುರಿ' ಎಂದು ನಾಮಕರಣವಾಗಲಿ

• ಪ್ರಜೋದಯ ವರದಿ

**ಹಾಸನ:** ಪ್ರಾಚೀನ ಕಲೆಯಾದ ಗಮಕ ಹಳಗನ್ನಡ ನಡುಗನ್ನಡ ಹೊಸಗನ್ನಡದ ಎಲ್ಲಾ ಕಾವ್ಯಗಳನ್ನು ಗಮಕ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ಹಾಸನದಂತಹ ಪುಟ್ಟ ನಗರದಲ್ಲಿ ಕಳೆದ ಇಪ್ಪತ್ಮೂರು ವರ್ಷಗಳಿಂದ ಗಮಕ ಹಬ್ಬ ಕವಿನಮನ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದರಿಂದ ಹಾಸನಕ್ಕೆ ಗಮಕ ಸಿಂಹಾಸನ ಎಂಬ ಹೆಸರಿನ್ನಿಟ್ಟರೆ ಹೆಚ್ಚು ಔಚಿತ್ಯಪೂರ್ಣವಾಗುತ್ತದೆ ಎಂದು ಕರ್ನಾಟಕ ಗಮಕ ಕಲಾಪರಿಷತ್ತಿನ ಸಲಹಾ ಸಮಿತಿ ಸದಸ್ಯೆ ವ್ಯಾಖ್ಯಾನ ಚತುರೆ ಬಿರುದಾಂಕಿತ ಶಾಂತಾ ನಾಗಮಂಗಲ ತಿಳಿಸಿದರು.

ಕರ್ನಾಟಕ ಗಮಕ ಕಲಾಪರಿಷತ್ತು



ಬೆಂಗಳೂರು, ಹಾಸನ ಜಿಲ್ಲಾ ಘಟಕ, ಸಂಸ್ಕಾರ ಭಾರತೀ ಕರ್ನಾಟಕ (ರಿ) ಹಾಸನ ಜಿಲ್ಲಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಸೀತಾ ರಾಮಾಂಜನೇಯ ಸೇವಾ ಸಮಿತಿ ಹಾಗೂ ಹಾಸನ ನಗರ ಗೃಹ ನಿರ್ಮಾಣ ಸಹಕಾರಿ ಸಂಘ. ನಿ. ಇವರ ಸಂಯುಕ್ತ ಆಶ್ರಯದಲ್ಲಿ ಜ.6 ರಿಂದ 12 ರ ವರೆಗೆ ನಡೆದ ಗಮಕ ಹಬ್ಬ ಕವಿನಮನ ಕಾರ್ಯಕ್ರಮದ ಸಮಾರೋಪ ಭಾಷಣ ಮಾಡುತ್ತಾ ಹಾಸನದ ಜನತೆಯನ್ನು ಕಾರ್ಯಕ್ರಮದ ಮುಖ್ಯ ರೂವಾರಿ ಕರ್ನಾಟಕ ಕಲಾಶ್ರೀ ಗಣೇಶ ಉಡುಪ ಅವರ ಕಾರ್ಯವನ್ನು ಮುಕ್ತ ಕಂಠದಿಂದ ಹೊಗಳಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿದ್ದು ಸಮಾಜಸೇವೆಯನ್ನೂ ಮಾಡುತ್ತಿರುವ ಖ್ಯಾತ ಸರ್ಜನ್ ಡಾ.ಎನ್. ರಮೇಶ್‌ಗೆ ಸಮಾಜ ಸೇವೀರಾಷ್ಟ್ರಕ, ಗಮಕ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದ ತುಮಕೂರಿನ ಗಮಕ ಕಲಾಶ್ರೀ ಲಕ್ಷ್ಮೀ ಜಯಪ್ರಕಾಶ್ ಅವರಿಗೆ ಉಭಯ ಕಲಾಪ್ರಪೂರ್ಣೆ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತೊಗಲುಗೊಂಬೆ ಕಲಾವಿದರಾದ ಗುಂಡುರಾಜ್ ಅವರಿಗೆ ಜಾನಪದ ಕಲಾಭೂಷಣ ಎಂಬ ಬಿರುದುಗಳನ್ನಿತ್ತು ಗೌರವಿಸಲಾಯಿತು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಪರಿಷತ್ತಿನ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಗಮಕ ಕಲಾಶ್ರೀ ರುಕ್ಮಿಣಿ ನಾಗೇಂದ್ರ, ಅವರು ಗಮಕ ಹಬ್ಬ ಕವಿನಮನ ಕಾರ್ಯಕ್ರಮ ನಡೆದು ಬಂದ ದಾರಿಯನ್ನು ತಿಳಿಸುತ್ತಾ ಪರಿಷತ್ತಿನ ಅಧ್ಯಕ್ಷ ಕಲಾಶ್ರೀ ಗಣೇಶ್ ಉಡುಪರ ಕಾರ್ಯಕ್ಷಮತೆಯನ್ನು ಕೊಂಡಾಡಿದರು. ಪರಿಷದಧ್ಯಕ್ಷ ಕಲಾಶ್ರೀ ಗಣೇಶ್ ಉಡುಪ ಅವರು ಗಮಕ ಹಬ್ಬಕ್ಕೆ ಏಳೂ ದಿನಗಳ ಕಾಲ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸಹಕರಿಸಿದ ಹಾಗೂ ಪ್ರಾಯೋಜನೆಯನ್ನು ನೀಡಿದ ಎಲ್ಲಾ ಗಮಕಕಲಾ ಪೋಷಕರನ್ನು ಸ್ಮರಿಸಿದರು.

ಅಂತರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರಿ ರಂಜಿನಿ ಹರೀಶ್ ಆಚಾರ್ಯ, ಪ್ರೊ.ಜಿ.ಎನ್.ಅನಸೂಯ, ಖ್ಯಾತ ರಂಗಭೂಮಿ ಕಲಾವಿದೆ ಪೂಜಾ ರಘುನಂದನ್, ಕಲಾಶ್ರೀ ಗಣೇಶ್ ಉಡುಪ ಇನ್ನಿತರರು ಹಾಜರಿದ್ದರು.

# ಕುಮಾರಸ್ವಾಮಿ 2 ಬಾರಿ ಬಾಡಿಗೆ ಆಧಾರ ಸಿಎಂ

## ಸಿದ್ದರಾಮಯ್ಯ ವಿರುದ್ಧ ಟೀಕೆ ಸರಿಯಲ್ಲ: ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ




**ಬೆಂಗಳೂರು:** ಹೆಚ್.ಡಿ.ಕುಮಾರಸ್ವಾಮಿ ಅವರು ಎರಡು ಬಾರಿ ಬಾಡಿಗೆ ಆಧಾರದಲ್ಲಿ ಮುಖ್ಯ ಮಂತ್ರಿಯಾಗಿದ್ದರೆಂದು ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ತಿರುಗೇಟು ನೀಡಿದರು.

ಸಿದ್ದರಾಮಯ್ಯ ಬಾಡಿಗೆ ಆಧಾರದಲ್ಲಿ ಮುಖ್ಯಮಂತ್ರಿ ಎಂಬ ಕುಮಾರಸ್ವಾಮಿ ಟೀಕೆಗೆ ಪ್ರತಿ ಕ್ರಿಯಿಸಿದ ಅವರು, ಸಿದ್ದರಾಮಯ್ಯ ಲೀಸ್ ಬೇಸ್ ಮುಖ್ಯಮಂತ್ರಿ ಆದರೆ ಕುಮಾರಸ್ವಾಮಿ ಏನು. ಕುಮಾರಸ್ವಾಮಿ 2 ಬಾರಿ ಮುಖ್ಯಮಂತ್ರಿಯಾಗಿದ್ದರು. ಅವರು ಲೀಸ್ ಬೇಸ್ ಮೇಲೆ ಆಗಿದ್ದರು ತಾನೇ. ಸುಮ್ಮನೆ ಟೀಕೆ ಮಾಡಲು ಮಾತನಾಡುವುದು ಬೇಡವೆಂದು ವಾಗ್ದಾಳಿ ನಡೆಸಿದರು.

ಕುಮಾರಸ್ವಾಮಿ ಅವರು ಯಾವತ್ತು 113 ಸ್ಥಾನಗಳನ್ನು ತೆಗೆದುಕೊಂಡು ಮುಖ್ಯಮಂತ್ರಿ ಯಾಗಿಲ್ಲ. 42 ಸ್ಥಾನ ತೆಗೆದುಕೊಂಡು ಮುಖ್ಯಮಂತ್ರಿ ಆದವರು. ಸಿದ್ದರಾಮಯ್ಯ ಆದರೂ 136 ಸ್ಥಾನ ಗೆದ್ದು ಮುಖ್ಯಮಂತ್ರಿ ಆಗಿದ್ದಾರೆ. ಕುಮಾರಸ್ವಾಮಿ ಅವರು ಈ ರೀತಿ ಮಾತನಾ ಡುವುದು ಅವರ ಘನತೆಗೆ ಸರಿಯಲ್ಲ. ಕುಮಾರಸ್ವಾಮಿ ರಾಜ್ಯ ರಾಜಕೀಯಕ್ಕೆ ಬರುವುದಾದರೆ ಸ್ವಾಗತ. ಅದೇ ರೀತಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಅರಸೀಕೆರೆ ಕ್ಷೇತ್ರಕ್ಕೆ ಬರುವುದಾದರೆ ಸ್ವಾಗತ. ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ಎಲ್ಲಿ ಬೇಕಾದರೂ ಸ್ಪರ್ಧೆ ಮಾಡ ಬಹುದು ಎಂದರು.

ನಾಯಕತ್ವ ಗೊಂದಲ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಆ ಬಗ್ಗೆ ನನಗೆ ಗೊತ್ತಿಲ್ಲ. ಹೈಕಮಾಂಡ್ ಈ ವಿಚಾರದ ಬಗ್ಗೆ ತೀರ್ಮಾನ ಮಾಡಲಿದೆ. ಯಾರೋ ಎರಡು ಜನ ಶಾಸಕರು ಮಾತನಾಡುತ್ತಾರೆ ಎಂದು ಮಾತಾಡಬೇಡಿ. ನಾಯಕತ್ವದ ಬಗ್ಗೆ ಮಾಧ್ಯಮಗಳು ಮಾತನಾಡುವುದು ನಿಲ್ಲಿಸಿ ಎಂದರು.

ನರೇಗಾ ಅನ್ಯಾಯದ ಬಗ್ಗೆ ಹಳ್ಳಿ ಹಳ್ಳಿಯಲ್ಲಿ ಪಾದಯಾತ್ರೆ ಮಾಡುತ್ತೇವೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಹೇಳುತ್ತೇವೆ. ಗ್ರಾಮ ಸ್ವರಾಜ್ಯ ಮಾಡಲು ಮನಮೋಹನ್ ಸಿಂಗ್ ನರೇಗಾ ಯೋಜನೆ ಜಾರಿ ಮಾಡಿದರು. ಬಿಜೆಪಿ ಅವರು ಈ ಯೋಜನೆಗೆ ಚಪ್ಪಡಿ ಎಳೆದಿದ್ದಾರೆ. ಮೊದಲು ಅವರೇ ಶೇ.100 ರಷ್ಟು ಹಣ ಕೊಡುತ್ತಿದ್ದರು. ಈಗ ಶೇ.40 ರಷ್ಟು ಏಕೆ ಎಂದು ಪ್ರಶ್ನಿಸಿದರು.

**ನಾನು ಸಚಿವ ಸ್ಥಾನದ ಆಕಾಂಕ್ಷಿ. ನನಗೆ ಸಚಿವ ಸ್ಥಾನ ಸಿಗಲಿದೆ ಎಂದಿದ್ದಾರೆ. ಯಾವಾಗ ಮಂತ್ರಿ ಆಗಬೇಕೆಂದು ಹಣೆಬರಹ ತೀರ್ಮಾನ ಮಾಡುತ್ತದೆ. ಹಣೆಯಲ್ಲಿ ಬರೆದಿದ್ದರೆ ಸಚಿವ ಆಗುತ್ತೇನೆ. ಇಲ್ಲ ಅಂದರೆ ಇಲ್ಲ.**
**-ಕೆ.ಎಂ.ಶಿವಲಿಂಗೇಗೌಡ, ಗೃಹಮಂಡಳಿ ಅಧ್ಯಕ್ಷ**

ಬಿಜೆಪಿಯಿಂದ ಬಳ್ಳಾರಿ ಪಾದಯಾತ್ರೆ ವಿಚಾರಕ್ಕೆ ಲೇವಡಿ ಮಾಡಿದ ಅವರು, ಬಳ್ಳಾರಿಯಿಂದ ಬೆಂಗಳೂರಿಗಾದರೂ ಮಾಡಲಿ, ಬೆಂಗಳೂರಿನಿಂದ ಹೈದರಾಬಾದಿಗಾದರೂ ಪಾದಯಾತ್ರೆ ಮಾಡಲಿ. ಪಾದಯಾತ್ರೆ ಮಾಡಲು ಅಲ್ಲಿ ಏನು ನಡೆದಿದೆ. ಅದೊಂದು ಸಣ್ಣ ಘಟನೆ ಅದಕ್ಕೆ ಪಾದಯಾತ್ರೆ ಮಾಡಬೇಕಾ. ಅವರು ಪೋಸ್ಟರ್ ಹರಿದು ಹಾಕಿದ್ದಕ್ಕೆ ಗಲಭೆ ನಡೆದಿದೆ. ಯಾರು ಗಲಾಟೆ ಮಾಡಿದ್ದು ಎಂದು ಪ್ರಶ್ನಿಸಿ ಬಿಜೆಪಿ ವಿರುದ್ಧ ಕಿಡಿಕಾರಿದರು.

## ಕಾಡಾನೆ ದಾಳಿಗೆ ಮಹಿಳೆ ಬಲಿ

» ಮೊದಲನೇ ಪುಟದಿಂದ

ಗಳ ನಿರ್ಲಕ್ಷ್ಯವೇ ಈ ದುರ್ಘಟನೆಗೆ ಕಾರಣ ಎಂದು ಆರೋಪಿಸಿ, ಕಾಡಾನೆಗಳ ಸಂಚಾರದ ಬಗ್ಗೆ ಮುಂಚಿತ ಮಾಹಿತಿ ನೀಡುತ್ತಿಲ್ಲ. ಪುಂಡಾನೆಗಳನ್ನು ಸೆರೆ ಹಿಡಿಯುತ್ತಿಲ್ಲ, ರೆಡಿಯೋ ಕಾಲರ್ ಅಳವಡಿಸದೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಘಟನಾ ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ ಹಾಗು ಡಿಎಫ್ಒ ಸೌರಭ್ ಕುಮಾರ್ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಆದರೆ, ಗ್ರಾಮಸ್ಥರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಪರಿಹಾರದ ಹಣ ನಮಗೆ ಬೇಡ, ಶಾಶ್ವತ ಪರಿಹಾರ ಬೇಕೆಂದು ಗ್ರಾಮಸ್ಥರು ಪಟ್ಟು ಹಿಡಿದರು.

ಶವ ಮೇಲೆತ್ತಲು ನಿರಾಕರಿಸಿ ಪ್ರತಿಭಟನೆ ತೀವ್ರಗೊಳಿಸಿದ್ದರಿಂದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಿದರು. ಶಾಸಕ ಸಿಮೆಂಟ್ ಮಂಜು ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ, ಮೃತ ಮಹಿಳೆಯ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು ಹಾಗು ಕಾಡಾನೆ ದಾಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಲಾಯಿತು. ಜಿಲ್ಲಾಧಿಕಾರಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ ಜನರನ್ನು ಮನವೊಲಿಸಲು ಪ್ರಯತ್ನಿಸಿದರು. ಸಚಿವ ಈಶ್ವರ್ ಖಂಡ್ರೆ ಅವರು ಮೃತರ ಕುಟುಂಬದವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಸಾಂತ್ವನ ಹೇಳಿದರು.

## ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಾರಾಧನೆ

» ಮೊದಲನೇ ಪುಟದಿಂದ

ಭಜನಾ ಮಂಡಳಿ, ಶ್ರೀ ಮಾರುತಿ ಭಜನಾ ಮಂಡಳಿ, ಶ್ರೀ ಛಾಯಾಪುತ್ರ ಭಜನಾ ಮಂಡಳಿ ಸೇರಿದಂತೆ ವಿವಿಧ ಭಜನಾ ಮಂಡಳಿಯವರು ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಕೊಡ್ಲಿಪೇಟೆ ಕಿರಿಕೊಡಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಬೆಂಗಳೂರು ವಿಜಯ ನಗರದ ಶ್ರೀ ತ್ರಿಲೋಕಾದೀಶ ಸ್ವಾಮೀಜಿ, ಬೆಂಗಳೂರು ಹಂಪಿ ನಗರ ಪತಂಜಲಿ ಯೋಗಾಶ್ರಮದ ಶ್ರೀ ಪ್ರಕಾಶ್ ಯೋಗಿ ಗುರೂಜಿ, ದೊಡ್ಡ ಸಾಗರ ರಾಮಕೃಷ್ಣ ಆಶ್ರಮದ ಸ್ವಾಮಿ ಮೇದಾನಂದ ಸ್ವಾಮೀಜಿ, ನೆಲಮಂಗಲ ಶಿವಾನಂದ ಆಶ್ರಮದ ಶ್ರೀ ರಮಾನಂದ ಸ್ವಾಮೀಜಿ, ಕೆಂಬಾಳು ಮಠದ ಶ್ರೀ ಹಿರಿಯಣ್ಣ ಸ್ವಾಮೀಜಿ, ಶ್ರೀ ಸಾಯಿಶ್ರೀ ಕೀರ್ತಿನಾಥ ಸ್ವಾಮೀಜಿ, ವಿವಿಧ ಮಠಗಳ ಮಠಾಧೀಶರು ಸಾನ್ನಿಧ್ಯ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಜನಪ್ರತಿನಿಧಿಗಳು ಹಾಗೂ ಸಮಾಜ ಮುಖಂಡರು ಭಾಗವಹಿಸಿದ್ದರು.

## ಮಂಗಳವಾರದ ಕಾಫಿ ಧಾರಣೆ: 50 ಕೆ.ಜಿ.ಗೆ

| ಟ್ರೇಡರ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ಹಾದಿ ಕಾಫಿ | 26,000 | 14,400 | 16,500 | 9,700 |
| ವೆಸ್ಟರ್ನ್ ಕಾಫಿ | 26,400 | 14,050 | 17,500 | 9,700 |
| ಗ್ರೈನ್‌ಕಾಫಿ ಸಕಲೇಶಪುರ | 26,500 | 14,000 | 17,000 | 9,400 |
| ಲಿಖಿತ್‌ಕಾಫಿ ಸಕಲೇಶಪುರ | 26,000 | 13,500 | 17,000 | 9,700 |
| ಗೀತಾ ಕಾಫಿ ಸಕಲೇಶಪುರ | 26,000 | 13,500 | 17,000 | 9,700 |
| ಬಾಳ್ಳುಪೇಟೆ | 26,100 | 13,500 | 17,000 | 9,500 |
| ಕೊಡ್ಲಿಪೇಟೆ | 26,000 | 13,500 | 16,500 | 9,000 |
| ಚಿಕ್ಕಮಗಳೂರು | 26,100 | 14,000 | 17,000 | 9,250 |
| ಮೂಡಿಗೆರೆ | 26,000 | 14,400 | 16,500 | 9,700 |
| ಮಡಿಕೇರಿ | 26,100 | 14,500 | 17,100 | 9,700 |
| ಸೋಮವಾರಪೇಟೆ | 26,100 | 14,000 | 00 | 00 |
| ಹಾಸನ | 26,000 | 13,000 | 00 | 00 |

## ಜಿಲ್ಲೆಯಲ್ಲಿ ಕಾಂಗ್ರೆಸ್ ಆಟ ನಡೆಯಲ್ಲ: ರೇವಣ್ಣ

» ಮೊದಲನೇ ಪುಟದಿಂದ

ಕಾಂಗ್ರೆಸ್‌ನ ಈ ಪ್ರಯತ್ನಗಳಿಗೆ ಅವಕಾಶ ನೀಡುವುದಿಲ್ಲ. ರಾಜ್ಯದ ಅಭಿವೃದ್ಧಿಯು ಹತ್ತು ವರ್ಷಗಳಷ್ಟು ಹಿಂದಕ್ಕೆ ಹೋಗಿದೆ. ಕೇವಲ ರಸ್ತೆಗಳ ಗುಂಡಿಯನ್ನು ಮುಚ್ಚುವ ಕಾರ್ಯದಲ್ಲಿ ಮಾತ್ರ ತೊಡಗಿಕೊಂಡಿದ್ದು, ರಾಜ್ಯದ ಜನರು ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತಕ್ಕ ಪಾಠವನ್ನು ಕಲಿಸುತ್ತಾರೆ. ಜಿಲ್ಲೆಯಲ್ಲಿ ಜೆಡಿಎಸ್‌ನ ಶಕ್ತಿ ಏನೆಂಬುದನ್ನು ಜ.24 ರಂದು ನಡೆಯುವ ಸಮಾವೇಶದ ಮೂಲಕ ನೀಡಲಾಗುವುದೆಂದರು.

ಮಾಜಿ ಸಚಿವ ಹೆಚ್.ಕೆ ಕುಮಾರಸ್ವಾಮಿ ಅವರು ಮಾತನಾಡಿ, ಹಾಸನದಲ್ಲಿ ನಡೆಯುವ ಜೆಡಿಎಸ್ ಬೃಹತ್ ಸಮಾವೇಶಕ್ಕೆ ನಮ್ಮ ಪಕ್ಷದ ವರಿಷ್ಠರಾದ ಹೆಚ್.ಡಿ.ದೇವೇಗೌಡರು, ಹೆಚ್.ಡಿ. ಕುಮಾರಸ್ವಾಮಿ ಅವರು ಭಾಗವಹಿಸುತ್ತಿದ್ದಾರೆ. ಆಲೂರು ತಾಲ್ಲೂಕಿನಿಂದ 5 ಸಾವಿರಕ್ಕೂ ಹೆಚ್ಚು ಜನರನ್ನು ಸಮಾವೇಶಕ್ಕೆ ಬರುವಂತೆ ಎಲ್ಲಾ ವ್ಯವಸ್ಥೆ ಮಾಡಬೇಕು. 2023 ರ ಚುನಾವಣೆ ಯಲ್ಲಿ ನಮ್ಮಪಕ್ಷಕೆಲವೇಮತಗಳಿಂದ ಸೋಲನ್ನು ಅನುಭವಿಸಿದೆ. 2028ರ ಚುನಾವಣೆಯಲ್ಲಿ ಈ ಕ್ಷೇತ್ರವನ್ನು ಮರಳಿ ಜೆಡಿಎಸ್ ತೆಕ್ಕೆಗೆ ತೆಗೆದು ಕೊಳ್ಳಲಿದ್ದು, ಯಾವುದೇ ಸಂದೇಹ ಬೇಡವೆಂದು ಹೇಳಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಕೆ.ಎಸ್ ಮಂಜೇಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಂಚಲ ಕುಮಾರಸ್ವಾಮಿ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಡಿ.ಎಸ್.ಜಯಣ್ಣ, ಧರ್ಮರಾಜು, ಹಾಸನ ಹಾಲು ಒಕ್ಕೂಟ ನಿರ್ದೇಶಕ ಪಿ.ಎಲ್.ನಿಂಗರಾಜು, ತಾ.ಪಂ.ಮಾಜಿ ಸದಸ್ಯ ನಟರಾಜು ನಾಕಲಗೂಡು, ಸಿ.ವಿ. ಲಿಂಗರಾಜು, ಮುಖಂಡರಾದ ಬಿ.ಸಿ. ಶಂಕರಾಚಾರ್, ಕದಾಳು ರಾಜಪ್ಪಗೌಡ, ಗಂಗಾಧರಪ್ಪ, ಗೇಕರವಳ್ಳಿ ಬಸವರಾಜು ಇತರರಿದ್ದರು.

## ಅಮೇರಿಕಾ ಸಾಮ್ರಾಜ್ಯಶಾಹಿ ಧೋರಣೆ ವಿರುದ್ಧ ಪ್ರತಿಭಟನೆ

• ಪ್ರಜೋದಯ ವರದಿ




**ಹಾಸನ:** ವೆನುಜುವೆಲಾ ದೇಶದ ಮೇಲೆ ಅಮೇರಿಕಾದ ಸಾಮ್ರಾಜ್ಯಶಾಹಿ ಧೋರಣೆ ಖಂಡಿಸಿ ಸಿಪಿಐಎಂ ವತಿಯಿಂದ ಮಂಗಳವಾರ ನಗರದ ಮಹಾವೀರ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್ ಅವರು ಮಾತನಾಡಿ, ಅಮೇರಿಕಾ ಜಗತ್ತಿಗೆ ಪ್ರಜಾಪ್ರಭುತ್ವ ಕುರಿತು ಪಾಠ ಮಾಡುತ್ತಾ ನಾನು ಪ್ರಜಾಪ್ರಭುತ್ವ ರಾಷ್ಟ್ರ ಎಂದು ಹೇಳುತ್ತಲೇ ಅತ್ಯಂತ ಪ್ರಜಾಪ್ರಭುತ್ವ ವಿರೋಧಿಯಾಗಿ ಸರ್ವಾಧಿಕಾರಿಯಾಗಿ ನಡೆದು ಕೊಳ್ಳುತ್ತಿದೆ. ಏಕಾಏಕಿ ನುಗ್ಗಿ ಬಾಂಬ್ ದಾಳಿ ನಡೆಸಿ ನೂರಕ್ಕೂ ಹೆಚ್ಚು ಜನರನ್ನು ಕೊಂದು ಅಲ್ಲಿನ ಅಧ್ಯಕ್ಷ ನಿಕೊಲೊಸ್ ಮಡುರೋ ಮತ್ತು ಆತನ ಪತ್ನಿಯನ್ನು ಅಪಹರಿಸಿರು ವುದು ಅತ್ಯಂತ ಖಂಡನೀಯ. ವೆನು ಜುವೆಲಾದ ತೈಲ ಮತ್ತು ಖನಿಜ ಸಂಪತ್ತನ್ನು ತನ್ನದಾಗಿಸಿಕೊಳ್ಳಬೇಕು. ಆ ಮೂಲಕ ತನ್ನ ದೇಶದ ಕಂಪನಿಗಳಿಗೆ ಲಾಭ ಮಾಡಿಕೊಡಬೇಕೆನ್ನುವ ಉದ್ದೇಶ ದಾಳಿಯ ಹಿಂದೆ ಇದೆ ಎಂದು ದೂರಿದರು.

ಅಮೇರಿಕಾ ಪ್ರಸ್ತುತ ಜಗತ್ತಿನ ಸಂಪತ್ತಿನ ಮೇಲೆ ತನ್ನ ಹಿಡಿತ ಸಾಧಿಸಲು ಸುಂಕ ಸಮರಕ್ಕೆ ಅಣಿಯಾಗಿದ್ದು, ಅದರಿಂದ ಭಾರತದ ಕೃಷಿಕರು ಮತ್ತು ಇಲ್ಲಿಯ ಉತ್ಪಾದನೆ ಸೇರಿ ಜಗತ್ತಿನ ಅನೇಕ ರಾಷ್ಟ್ರಗಳ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಭಾರತದ ಉತ್ಪನ್ನಗಳ ಮೇಲೆ ಅಮೇರಿಕಾ ಶೇ.500 ರಷ್ಟು ಆಮದು ಸುಂಕ ವಿಧಿಸಿದರೆ ಭಾರತದ ಯಾವ ಉತ್ಪನ್ನಗಳನ್ನು ಅಮೇರಿಕದಂತಹ ದೇಶಗಳಲ್ಲಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಅದರಿಂದ ನಮ್ಮಂತಹ ದೇಶದ ಆರ್ಥಿಕತೆ ಮೇಲೆ ತೀವ್ರ ಹೊಡೆತ ಬೀಳುತ್ತದೆ. ಈ ನೀತಿಯನ್ನು ಎಲ್ಲರೂ ವಿರೋಧಿಸಬೇಕೆಂದರು.

ಕಾರ್ಯದರ್ಶಿ ಎಂ.ಜಿ.ಪೃಥ್ವಿ, ಜಿಲ್ಲಾ ಸಮಿತಿ ಸದಸ್ಯರಾದ ಜಿ.ಪಿ. ಸತ್ಯನಾರಾಯಣ, ಅರವಿಂದ ಮತ್ತು ಜನಪರ ಸಂಘಟನೆಗಳ ಮುಖಂಡರಾದ ರಾಜಶೇಖರ್ ಹುಲಿಕಲ್, ರಾಜು ಗೊರೂರು, ಟಿ.ಆರ್. ವಿಜಯ್ ಕುಮಾರ್, ಪ್ರಕಾಶ್, ಮುಬಷಿರ್ ಅಹಮದ್, ಇರ್ಷಾದ್ ಅಹಮ್ ದೇಸಾಯಿ, ಸಿ ಸೌಭಾಗ್ಯ, ಮಮತಾ ಶಿವು, ಚಿನ್ನೇನಹಳ್ಳಿ ಸ್ವಾಮಿ, ಅನ್ಸರ್, ರಮೇಶ್ ಇದ್ದರು.

**ಅಧಿಕಾರಿಗಳು, ರೈತರೊಂದಿಗೆ ಶಾಸಕ ಎ.ಮಂಜು ಸಭೆ | ಮೊದಲ ಹಂತದಲ್ಲಿ 117 ಕೆರೆಗಳಿಗೆ ನೀರು**

## 3 ತಿಂಗಳೊಳಗೆ ಮಲ್ಲಿಪಟ್ಟಣ-ಕಟ್ಟೇಪುರ ಏತ ನೀರಾವರಿ ಕಾಮಗಾರಿ ಪೂರ್ಣ

• ಪ್ರಜೋದಯ ವರದಿ



**ಅರಕಲಗೂಡು:** ಬಹು ನಿರೀಕ್ಷಿತ ಮಲ್ಲಿಪಟ್ಟಣ-ಕಟ್ಟೇಪುರ ಏತ ನೀರಾವರಿ ಯೋಜನೆಯ ಮೊದಲ ಹಂತದ ಕಾಮಗಾರಿ ಮುಗಿಯುವ ಹಂತಕ್ಕೆ ಬಂದಿದ್ದು, ಮೂರು ತಿಂಗಳೊಳಗೆ ಬಾಕಿ ಕೆಲಸ ಮುಗಿಸಿ ಕೆರೆಗಳಿಗೆ ನೀರು ತುಂಬಿಸಲು ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಶಾಸಕ ಎ.ಮಂಜು ಅವರು ಸೂಚನೆ ನೀಡಿದರು.

ಮಂಗಳವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳು, ರೈತರೊಂದಿಗೆ ಸಭೆ ನಡೆಸಿದ ಅವರು, ಕಳೆದ 7 ವರ್ಷಗಳ ಹಿಂದೆ 120 ಕೋಟಿ ರೂ. ವೆಚ್ಚದಲ್ಲಿ ಯೋಜನೆಗೆ ಚಾಲನೆ ನೀಡಲಾಗಿತ್ತು. ಸೋಮವಾರಪೇಟೆ ಹಾಗೂ ಅರಕಲಗೂಡು ತಾಲ್ಲೂಕಿನ ಒಟ್ಟು 117 ಕೆರೆಗಳಿಗೆ ಮೊದಲ ಹಂತದಲ್ಲಿ ನೀರು ತುಂಬಿಸುವ ಗುರಿ ಹೊಂದಲಾಗಿದೆ. ಈ ಯೋಜನೆಯಿಂದ 47 ರಿಂದ 50 ಗ್ರಾಮಗಳ ಜನ ಜಾನುವಾರುಗಳಿಗೆ ಕುಡಿಯುವ ನೀರು ಲಾಭವಾಗಲಿದೆ ಎಂದರು.

ಮೊದಲ ಹಂತದ ಯೋಜನೆಯ ರೈಸಿಂಗ್ ಮೇನ್ ಪೈಪ್‌ಲೈನ್ 11 ಕಿ.ಮೀ ಉದ್ದವಿದ್ದು, ಸಬ್‌ಲೈನ್‌ಗಳು ಒಟ್ಟು 78.83 ಕಿ.ಮೀ ದೂರವನ್ನು ಹೊಂದಿವೆ. ಈ ಮಧ್ಯೆ 2.65 ಕಿ.ಮೀ ರೈಸಿಂಗ್ ಮೇನ್ ಅಳವಡಿಕೆಯಲ್ಲಿ ಸ್ಥಳೀಯ ರೈತರಿಂದ ಅಡಚಣೆ ಉಂಟಾಗಿತ್ತು. ಇಂದು ರೈತ ರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಪೈಪ್‌ಲೈನ್ ಅಳವಡಿಸುವ ವೇಳೆ ಹಾನಿಗೊಳಗಾಗುವ ಗಿಡ, ಮರಗಳಿಗೆ ಸೂಕ್ತ ಪರಿಹಾರ ಕಲ್ಪಿಸುವ ಭರವಸೆ ನೀಡಿದ ಮೇರೆಗೆ ಅವರು ಒಪ್ಪಿಕೊಂಡಿದ್ದಾರೆ. ಕೆಲಸ ನಿರ್ವಹಿಸುವ ವೇಳೆ ಆಯಾಭಾಗದ ರೈತರ ಸಲಹೆಯನ್ನು ಪರಿಗಣನೆಗೆ ತೆಗೆದು ಕೊಳ್ಳಬೇಕೆಂದು ಅಧಿಕಾರಿಗಳು, ಗುತ್ತಿಗೆದಾರರಿಗೆ ಸೂಚಿಸಿದರು.

ಸಮಸ್ಯೆ ಕುರಿತು ಕಂದಾಯ, ನೀರಾವರಿ, ಲೋಕೋಪಯೋಗಿ ಇಲಾಖೆ, ಸೆಸ್ಕ್, ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ರೈತರಿಗೆ ಆಗಬೇಕಿರುವ ಅನುಕೂಲ ಕುರಿತು ಸಮಾಲೋಚನೆ ನಡೆಸಲಾಗಿದೆ. ರೈತರು ಸಹಕಾರ ನೀಡಿದ್ದು, ಕಾನೂನು ಪ್ರಕಾರ ದೊರೆಯಬೇಕಾದ ಪರಿಹಾರದ ಹಣವನ್ನು ನೀಡುವ ಜವಾಬ್ದಾರಿಯನ್ನು ನಾನು ಮತ್ತು ಇಲಾಖೆಗಳು ತೆಗೆದುಕೊಂಡಿದ್ದೇವೆಂದು ಹೇಳಿದರು.

2ನೇ ಹಂತದಲ್ಲಿ ಸುಮಾರು 77 ಕೋಟಿ ರೂ. ವೆಚ್ಚದಲ್ಲಿ 80 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಆಗಬೇಕಿದೆ. ಅದರಿಂದ 32 ಗ್ರಾಮಗಳಿಗೆ ಲಾಭವಾಗಲಿದೆ. ಮಲ್ಲಿಪಟ್ಟಣ, ಕೊಣನೂರು ಹೋಬಳಿ ಹಾಗೂ ದೊಡ್ಡಮಗ್ಗೆ ಭಾಗದ ಹಳ್ಳಿಗಳ ಕೆರೆಗಳಿಗೆ ನೀರು ತುಂಬಲಿದೆ. ಅದರಿಂದ ಈ ಭಾಗದ ಕೆರೆಗಳು ತುಂಬಿದರೇ ರೈತರ ಕೊಳವೆಬಾವಿ ಅಂತರ್ಜಲ ವೃದ್ಧಿಯಾಗಿ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಸಹಕಾರಿಯಾಗಲಿದೆ. ಸರ್ಕಾರದಿಂದ ಹಣ ಬಿಡುಗಡೆಗೊಳಿಸಿ ಕಾಮಗಾರಿ ಆರಂಭಿಸಲಾಗುವುದು ಎಂದರು.

ಸಭೆಯಲ್ಲಿ ತಹಶೀಲ್ದಾರ್ ಸೌಮ್ಯ, ನೀರಾವರಿ ಇಲಾಖೆ ಇಇ ಪುಟ್ಟಸ್ವಾಮಿ, ಪಿಡ್ಬ್ಲ್ಯುಡಿ ಎಇಇ ಬಿಂದು, ಕಂದಾಯ ಇಲಾಖೆ, ವಿದ್ಯುತ್ ಇಲಾಖೆ ಅಧಿಕಾರಿಗಳು, ಗುತ್ತಿಗೆದಾರ ಹಾಗೂ ರೈತರು ಭಾಗವಹಿಸಿದ್ದರು.

## ವಿಜೃಂಭಣೆಯ ಬೈಲಹಳ್ಳಿ ಜಾತ್ರಾ ಮಹೋತ್ಸವ





• ಪ್ರಜೋದಯ ವರದಿ

**ಹಾಸನ:** ಇತಿಹಾಸ ಪ್ರಸಿದ್ಧಿ ಪಡೆದಿರುವ ತಾಲ್ಲೂಕಿನ ಬೈಲಹಳ್ಳಿ ಶ್ರೀ ಲಕ್ಷ್ಮೀ ಜನಾರ್ಧನಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು.

ಬ್ರಹ್ಮೋತ್ಸವದ ಅಂಗವಾಗಿ ಬೆಳಿಗ್ಗೆ ಸೂರ್ಯಮಂಡಲೋತ್ಸವ, ವೇದ ಪಾರಾಯಣ, ದಿವ್ಯ ಪ್ರಬಂಧ ಸೇವೆ, ಶ್ರೀಕೃಷ್ಣ ಗಂಧೋತ್ಸವ, ಮಹಾ ಮಂಗಳಾರತಿ ಬಳಿಕ ಪುಷ್ಪಾಲಂಕೃತ ರಥದಲ್ಲಿ ದಿವ್ಯ ರಥಾರೋಹಣ ಆರಂಭಗೊಂಡಿತು. ನೆರೆದಿದ್ದ ಸಾವಿರಾರು ಭಕ್ತರು ಗೋವಿಂದಾ, ಗೋವಿಂದಾ ನಾಮ ಸ್ಮರಣೆಯೊಂದಿಗೆ ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಕುಟುಂಬ ಸಮೇತರಾಗಿ ಭಾಗವಹಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ದೇಶ, ಹೊರ ದೇಶದಲ್ಲಿ ನೆಲೆಸಿರುವ ಗ್ರಾಮದವರು ಆಗಮಿಸಿ ದೇವರ ದರ್ಶನ ಪಡೆದರು.

ರಥೋತ್ಸವದ ಅಂಗವಾಗಿ ನಡೆದ ಜಾತ್ರೆಯಲ್ಲಿ ಮಕ್ಕಳು ಸೇರಿ ದೊಡ್ಡವರು ಅಗತ್ಯ ವಸ್ತುಗಳನ್ನು ಖರೀದಿಸಿ ಸಂಭ್ರಮಿಸಿದರು.

## ಪ್ರತ್ಯೇಕ ಟ್ರ್ಯಾಕ್ಟರ್ ಅವಘಡ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ದುದ್ದ ಹಾಗು ಚನ್ನರಾಯಪಟ್ಟಣ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ದುದ್ದ ಹೋಬಳಿ ಕೆ.ಹೊನ್ನೇನಹಳ್ಳಿ ಗ್ರಾಮದ ಇಂದ್ರೇಶ್ ಮೃತರು. ಗ್ರಾಮದ ಕೆರೆಯಿಂದ ಮಣ್ಣು ತುಂಬಿಕೊಂಡು ಜಮೀನಿಗೆ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ಇಂದ್ರೇಶ್ ಅವರು ಟ್ರೈಲರ್ ಮತ್ತು ಇಂಜಿನ್ ನಡುವೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದುಪ್ರಕರಣದಲ್ಲಿ ವಿದ್ಯುತ್ ಕಂಬಕ್ಕೆ ಟ್ರ್ಯಾಕ್ಟರ್ ಡಿಕ್ಕಿ ಯಾಗಿ ಚಾಲಕ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ನಂದಿಪುರ ಸಮೀಪ ನಡೆದಿದೆ.

ಗೊರಮಾರನಹಳ್ಳಿ ಗ್ರಾಮದ ಸೈಯದ್‌ಬಷೀರ್ ಮೃತರು. ಬೋಡ್ರಸ್ ಕಲ್ಲುಗಳನ್ನು ತುಂಬಿಸಿ ಕೊಂಡು ನಂದಿಪುರ ಗ್ರಾಮದಲ್ಲಿ ಅನ್‌ಲೋಡ್ ಮಾಡಿ ವಾಪಾಸ್ ಚನ್ನರಾಯ ಪಟ್ಟಣಕ್ಕೆ ಬರುತ್ತಿದ್ದಾಗ ವೇಗವಾಗಿ ಚಲಾಯಿಸಿದ್ದರಿಂದ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಗಂಭೀರ ಗಾಯ ಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖ ಲಿಸಲಾಯಿತಾದರೂ ಮಾರ್ಗಮಧ್ಯೆ ಯೇ ಮೃತಪಟ್ಟಿದ್ದಾರೆಂದು ವೈದ್ಯರು ತಿಳಿಸಿದರು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಟ ಯಶ್ ತಾಯಿ ಪುಷ್ಪಾ ಅಕ್ರಮ ನಿವೇಶನ ಖರೀದಿಸಿದ್ದಾರೆ : ಆರೋಪ

• ಪ್ರಜೋದಯ ವರದಿ




**ಹಾಸನ:** ನಟ ಯಶ್ ಅವರ ತಾಯಿ ಪುಷ್ಪಾ ವಿದ್ಯಾ ನಗರದಲ್ಲಿ ಅಕ್ರಮ ನಿವೇಶನ ಖರೀದಿಸಿ ಮೋಸಕ್ಕೊಳಗಾಗಿ ಈಗ ತಮ್ಮ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆಂದು ಜಿಪಿಎ ಹೋಲ್ಡರ್ ದೇವರಾಜು ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 1965ರಿಂದ ಇಲ್ಲಿಯವರೆಗಿನ ಎಲ್ಲಾ ದಾಖಲೆಗಳು ನಮ್ಮ ಬಳಿ ಇವೆ. ಸಿ.ಜೆ.ವೀಣಾ ಎಂಬುವವರಿಂದ ನಿವೇಶನ ಖರೀದಿಸಿದ ಪುಷ್ಪಾ ಮೂಲ ದಾಖಲೆಗಳನ್ನು ಪರಿಶೀಲಿಸಲಿಲ್ಲ. ವೀಣಾ ಯಾರಿಂದ ಜಾಗ ಖರೀದಿಸಿದರು ಮತ್ತು ಅದು ಚರಾಸ್ತಿಯೋ ಅಥವಾ ಸ್ಥಿರಾಸ್ತಿಯೇ ಎಂಬುದನ್ನು ಅರಿಯಬೇಕಿತ್ತು. ಬೇರೆ ಯಾರಿಂದಲೋ ಅನ್ಯಾಯಕ್ಕೊಳ ಗಾಗಿ ನಮ್ಮ ಮೇಲೆ ಗೂಬೆ ಕೂರಿಸುತ್ತಿದ್ದಾರೆಂದರು.

ಒಟ್ಟು 10 ಗುಂಟೆ ಜಮೀನಿನಲ್ಲಿ 5 ಗುಂಟೆ ಲಕ್ಷ್ಮಮ್ಮ ಎಂಬುವವರಿಗೆ ಸೇರಿದೆ. ಮೂಲ ಖಾತೆದಾರರಾದ ಕರೀಗೌಡ ಅವರಿಂದ 1965ರ ಜೂ. 19ರಂದು 5 ಗುಂಟೆ ಜಾಗ ರಾಮಕೃಷ್ಣ ಎಂಬುವವರಿಗೆ ಖಾತೆಯಾಗಿತ್ತು. ನಂತರ ರಾಮಕೃಷ್ಣ ಅವರು ತಮ್ಮ ತಂದೆ ಚಿಕ್ಕೇಗೌಡರಿಗೆ ಮಾರಾಟ ಮಾಡಿದ್ದರು. ಈ ವೇಳೆ ಬೋಗಸ್ ವಿಸ್ತೀರ್ಣ ನಮೂದಿಸಿದ್ದು, ಇಷ್ಟೆಲ್ಲಾ ಸಮಸ್ಯೆಗೆ ಅದೇ ಕಾರಣ. ಚಿಕ್ಕೇಗೌಡರಿಂದ 1978ರಲ್ಲಿ ಡಾ.ಕೆ.ರಾಮಭಟ್ಟ, ಈರೇಗೌಡ ಹಾಗು ರುದ್ರೇಗೌಡರ ಹೆಸರಿಗೆ ಖಾತೆಯಾಗಿದೆ. ನಂತರದಲ್ಲಿ ಚಿಕ್ಕೇಗೌಡರಿಂದ 1982ರಲ್ಲಿ ಪಿ. ಮಲ್ಲೇಶ್ ಅವರಿಂದ ಗಿರೀಶ್ ಮಹಲಿಂಗಪ್ಪಗೆ, ನಂತರದಲ್ಲಿ ಸಿ.ಜೆ.ವೀಣಾ ಅವರಿಂದ ಯಶ್ ತಾಯಿ ಪುಷ್ಪ ಅರುಣ್‌ಕುಮಾರ್‌ಗೆ ಮಾರಾಟವಾಗಿದೆ ಎಂದರು.

ರಾಮಕೃಷ್ಣ ಹಾಗು ಅವರ ತಂದೆ ಚಿಕ್ಕೇಗೌಡ ಬೋಗಸ್ ವಿಸ್ತೀರ್ಣವನ್ನು ನಮೂದಿಸಿ ನೋಂದಣಿ ಮಾಡಿಸಿದ್ದಾರೆ. ಅದ್ಯಾವುದನ್ನು ಪರಿಶೀಲಿಸದೆ ಸಿ.ಜೆ.ವೀಣಾ ಖರೀದಿಸಿದ್ದರು. ಪುಷ್ಪಾ ಸಹ ಅದೇ ತಪ್ಪು ಮಾಡಿದ್ದಾರೆಂದು ದೂರಿದರು.

ಆ ಜಾಗವು ತಮ್ಮದೆಂದು ವಾದಿಸುತ್ತಿರುವ ಪುಷ್ಪಾ ಸರಿಯಾಗಿ ದಾಖಲಾತಿಗಳನ್ನು ಪರಿಶೀಲಿಸಬೇಕಿತ್ತು. ಈ ಸಂಬಂಧ ನಾವು ಪುಷ್ಪಾ ಅರುಣ್‌ಕುಮಾರ್ ಅವರಿಗೆ ಸಾಕಷ್ಟು ಸಲ ತಿಳಿ ಹೇಳಿದರೂ ಕೇಳಲಿಲ್ಲ. ಲಕ್ಷ್ಮಮ್ಮ ಅವರು ಮೈಸೂರಿನಲ್ಲಿ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಅವರ ಪುತ್ರ ವಿದೇಶದಲ್ಲಿದ್ದಾರೆ. ನಮ್ಮ ತಂದೆಯೂ ಶಿಕ್ಷಕರಾಗಿದ್ದರಿಂದ ನನ್ನ ಮೇಲೆ ವಿಶ್ವಾಸವಿಟ್ಟು ಜಾಗವನ್ನು ನನಗೆ 2020ರಲ್ಲಿ ಜಿಪಿಎ ಮಾಡಿದ್ದಾರೆ. ಈ ಅವ್ಯವಹಾರದಲ್ಲಿ ತೆರಿಗೆ ಇಲಾಖೆ ನೌಕರ ನಟರಾಜ್ ಎಂಬುವವನು ಸೇರಿಕೊಂಡಿದ್ದಾನೆ. ಜೊತೆಗೆ ಪುಷ್ಪಾ ಅವರ ಸಂಬಂಧಿ ದುರ್ಗಾ ಪ್ರಸಾದ್‌ನದ್ದೂ ಕೈವಾಡ ಇದೆ ಎಂದು ಆರೋಪಿಸಿದರು.

**ನಟನ ಹೆಸರಿಗೆ ಮಸಿ ಬಳಿಯಬೇಡಿ**

ಜಾಗ ನಮಗೆ ಸೇರಿದೆ ಎಂದು ನ್ಯಾಯಾಲಯ ಆದೇಶ ಮಾಡಿದ ಬಳಿಕವೇ ಕಾಂಪೌಂಡ್ ತೆರವುಗೊಳಿಸಿ ನಾಮಫಲಕ ಅಳವಡಿಸಿದ್ದೇವೆ. ನಟ ಯಶ್ ಅವರ ಮೇಲೆ ನಮಗೆ ಅಪಾರ ಗೌರವವಿದೆ. ಯಾರದೋ ಮಾತು ಕೇಳಿ ನಟನ ಹೆಸರಿಗೆ ಕಳಂಕ ತರಬೇಡಿ ಎಂದು ಪುಷ್ಪಾ ಅರುಣ್ ಕುಮಾರ್ ಅವರಿಗೆ ಸಲಹೆ ನೀಡಿದರು.

ಆ ಜಾಗ ತಮ್ಮದಲ್ಲ ಎನ್ನುವುದು ದಾಖಲೆಗಳ ಸಮೇತ ಸಾಬೀತಾದರೆ ನಾನು ಆ ಕಡೆ ಬರುವುದಿಲ್ಲವೆಂದು ಪುಷ್ಪಾ ಅವರು ನನಗೆ ಖುದ್ದಾಗಿ ಹೇಳಿದ್ದಾರೆ. ಈಗ ಉಲ್ಟಾ ಹೊಡೆಯುತ್ತಿದ್ದಾರೆಂದರು. ದಾಖಲೆಗಳಿಲ್ಲದೆ ಇಲ್ಲಸಲ್ಲದ ಆರೋಪ ಮಾಡಿ ನಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಅವರಿಂದ ತೊಂದರೆಯಾಗುತ್ತಿದೆ ಎಂದು ನಾವು ದೂರು ನೀಡಿದರೆ ಪೊಲೀಸರು ಇನ್ನೂ ಎಫ್‌ಐಆರ್ ದಾಖಲಿಸಿಲ್ಲ. ಅವರು ಪ್ರಭಾವಿಗಳು ಎಂಬ ಕಾರಣಕ್ಕೆ ನಮ್ಮ ದೂರನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದು ಅಳಲು ತೋಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ದೇವರಾಜೇಗೌಡ ಸಂಬಂಧಿ ದಿಲೀಪ್, ಕುಮಾರ್, ತುಳಸಿ ರಾಮ್, ಸುಶೀಲೇಗೌಡ, ಶೇಖರ್ ಇತರರು ಹಾಜರಿದ್ದರು.

## ಆಸ್ತಿಗಾಗಿ ಹೆಣ್ಣು ಮಕ್ಕಳಿಂದ ಬೇಡಿಕೆ: ವ್ಯಕ್ತಿ ನೇಣಿಗೆ ಶರಣು

• ಪ್ರಜೋದಯ ವರದಿ

**ಹಾಸನ:** ಆಸ್ತಿಯಲ್ಲಿ ಪಾಲು ಬೇಕೆಂದು ತಂದೆಯ ಸಹೋದರಿಯರು ನ್ಯಾಯಾಲಯ ಮೆಟ್ಟಿಲೇರಿದ್ದರಿಂದ ಹಾಗು ದಾರಿಯಲ್ಲಿ ಸಿಕ್ಕಾಗ ಅವಾಚ್ಯ ಪದಗಳಿಂದ ನಿಂದಿಸುತ್ತಿದ್ದರಿಂದ ಮನನೊಂದ ವ್ಯಕ್ತಿ ನೇಣಿಗೆ ಶರಣಾಗಿರುವ ಘಟನೆ ತಾಲ್ಲೂಕಿನ ಗಾಣಿಗರಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಘು ಮೃತರು. ತಂದೆ ತಮ್ಮಯ್ಯನವರಿಗೆ ಪಿತ್ರಾಜಿತವಾಗಿ ಬಂದಿದ್ದ 4 ಎಕರೆ ಜಮೀನಿದೆ. ಅದರಲ್ಲಿ ತಮಗೂ ಪಾಲು ನೀಡಬೇಕೆಂದು ತಂದೆಯ ಸಹೋದರಿಯರ ಮಕ್ಕಳು ನ್ಯಾಯಾಲಯ ಮೆಟ್ಟಿಲೇರಿದ್ದರು. ಕಳೆದ ನಾಲ್ಕು ವರ್ಷಗಳಿಂದ ವಿಚಾರಣೆಗೆ ಹಾಜರಾಗುತ್ತಿದ್ದ ರಘು ಮಾನಸಿಕವಾಗಿ ನೊಂದಿದ್ದರು. ಜ.11ರ ರಾತ್ರಿ ಅದೇ ಬೇಜಾರಿನಿಂದ ಊಟ ಮಾಡಿ ಮಲಗಿದ್ದ ರಘು ಬೆಳಿಗ್ಗೆ ಜಮೀನು ಕೆಲಸಕ್ಕೆ ಹೋಗುತ್ತೇನೆಂದು ತೆರಳಿದ್ದರು. ಎಷ್ಟೇ ಹೊತ್ತಾದರೂ ವಾಪಾಸ್ ಬಾರದ ಹಿನ್ನಲೆಯಲ್ಲಿ ಕುಟುಂಬಸ್ಥರು ಜಮೀನು ಕಡೆಗೆ ಹೋಗಿ ನೋಡಿದಾಗ ಪಕ್ಕದ ಮಂಜೇಗೌಡ ಅವರ ಹೊಲದಲ್ಲಿದ್ದ ಹಲಸಿನ ಮರಕ್ಕೆ ನೇಣಿಗೆ ಶರಣಾಗಿರುವುದು ಗೊತ್ತಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಪುರಸಭಾ ಕಾರ್ಯಾಲಯ, ಸಕಲೇಶಪುರ**
ದೂರವಾಣಿ ಸಂಖ್ಯೆ: 08173-244042 email: itstaff_ulb_sakleshpur@yahoo.com
Website: www.sakaleshpurtown.gov.in
ನಂ/ಮುನಿಸಿ/ಜಾತ್ರೆ/ಪಿ.ಆರ್/01/2025-23 ದಿನಾಂಕ 01-01-2026

**ಕೊಟೇಷನ್ ಪ್ರಕಟಣೆ**

ಸಕಲೇಶಪುರ ಪಟ್ಟಣದ2026ರ ಶ್ರೀ ಸಕಲೇಶ್ವರ ಸ್ವಾಮಿಯವರ ದಿವ್ಯ ರಥೋತ್ಸವದ ಪ್ರಯುಕ್ತ 68ನೇ ವರ್ಷದ ಜಾತ್ರಾ ವಸ್ತು ಪ್ರದರ್ಶನವನ್ನು ನಡೆಸಲು ಕನಿಷ್ಠ 01 ರಿಂದ 03 ಎಕರೆ ಜಾಗದ ಅವಶ್ಯಕತೆ ಇರುವುದರಿಂದ, ಸಕಲೇಶಪುರ ಪಟ್ಟಣದ 1 ಕಿ.ಮೀ ವ್ಯಾಪ್ತಿಯೊಳಗೆ ಇರುವಂತಹ ಖಾಸಗಿ ಜಾಗದ ಮಾಲೀಕರು ತಮ್ಮ ಜಮೀನನ್ನು 15 ದಿನಗಳ ಕಾಲಾವಧಿಗೆ ಬಾಡಿಗೆಗೆ ನೀಡಲು ಆಸಕ್ತಿಯುಳ್ಳವರು ದಿನಾಂಕ 01-01-2026 ರಿಂದ 16-01-2026 ರೊಳಗಾಗಿ ಈ ಕಛೇರಿಗೆ ತಮ್ಮ ಮೂಲ ದಾಖಲಾತಿಗಳೊಂದಿಗೆ ಒಂದು ಎಕರೆಗೆ ದರವನ್ನು ನಮೂದಿಸಿ ಕೊಟೇಷನ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-ಮುಖ್ಯಾಧಿಕಾರಿ,
ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/932/ಕೆಎಸ್‌ಎಂಸಿಎ/2025-26

**ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.**
web:http://www.hassancity.gov.in Email: ka.hassancmc@gmail.com ದೂರವಾಣಿ: 08172- 268276
ಸಹಾಯವಾಣಿ: 08172-233702 ಫ್ಯಾಕ್ಸ್: 08172-234792
ನಂ.ಹಾಮಪಾ/ತಾ.ಶಾ/ಸ.ಅ/2025-26 ದಿನಾಂಕ:12-01-2026

**: ಪತ್ರಿಕಾ ಪ್ರಕಟಣೆ :**

ಹಾಸನ ನಗರಕ್ಕೆ 3ನೇ ಹಂತದ ಒಳಚರಂಡಿ ಯೋಜನೆಗೆ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯ ತಮ್ಲಾಪುರ ಗ್ರಾಮದ ಸರ್ವೆ ನಂ.49/4 ರಲ್ಲಿನ ಒಟ್ಟು 0.27 ಗುಂಟೆ ಖುಷ್ಕಿ ಜಮೀನನ್ನು ನೇರ ಖರೀದಿ ಪಡೆದುಕೊಳ್ಳಲು ದಿನಾಂಕ:31-12-2025 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ ಹಾಸನ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಬೆಲೆ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡ ಜಮೀನನ್ನು ನೇರ ಖರೀದಿ ಮುಖೇನ ಪಡೆಯಲಾಗಿದ್ದು ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಕಛೇರಿಗೆ 7 ದಿನಗಳೊಳಗಾಗಿ ಸಲ್ಲಿಸಲು ಕೋರಿದೆ. ಕ್ರ ಸಂ.1)ಗ್ರಾಮ: ತಮ್ಲಾಪುರ ಭೂ ಮಾಲೀಕರ ಹೆಸರು: 1.ಜಿ.ಗಂಗಣ್ಣ ಬಿನ್ ಲೇ:ಗುಂಡೇಗೌಡ 2.ನಾಗರಾಜು ಉ.ರಂಗೇಗೌಡ ಬಿನ್ ಲೇ:ಗುಂಡೇಗೌಡ 3.ಶಿವನಂಜೇಗೌಡ ಉ.ಶಿವಣ್ಣ ಲೇ:ಗುಂಡೇಗೌಡ 4.ಟಿ.ಗೋಪಾಲ ಕೃಷ್ಣೇಗೌಡ ಬಿನ್ ಲೇ:ಗುಂಡೇಗೌಡ 5.ಟಿ.ವೆಂಕಟೇಶ ಲೇ:ಗುಂಡೇಗೌಡ 6.ಟಿ.ಜಿ.ರೇವಣ್ಣ ಬಿನ್ ಲೇ:ಗುಂಡೇಗೌಡ (ಜಂಟಿ) ವಿಸ್ತೀರ್ಣ (ಗುಂಟೆಗಳಲ್ಲಿ)0.27 ಭೂಮಿಯ ವಿಧ:ಖುಷ್ಕಿ

ಸಹಿ/-ಆಯುಕ್ತರು, ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/931/ಕೆಎಸ್‌ಎಂಸಿಎ/2025-26

**ರಚನಾ ಪಬ್ಲಿಕ್ ಶಾಲೆಯಲ್ಲಿ ಆಹಾರ ಮೇಳ | ಗೃಹೋಪಯೋಗಿ ವಸ್ತು, ಆಹಾರ ಪದಾರ್ಥ ಮಾರಾಟ**

## ವ್ಯವಹಾರಿಕ ಜ್ಞಾನ ತಿಳಿಯಲು ಮಕ್ಕಳ ಸಂತೆ ಸಹಕಾರಿ

• ಪ್ರಜೋದಯ ವರದಿ





**ಚನ್ನರಾಯಪಟ್ಟಣ:** ಮಕ್ಕಳಿಗೆ ಆರ್ಥಿಕ ಜ್ಞಾನ ಮತ್ತು ಗ್ರಾಮೀಣ ಭಾಗದ ಜನರ ಬದುಕಿನ ಜೀವನ ಹೇಗಿರುತ್ತೆ ಎಂಬುದನ್ನು ತೋರಿಸಿ ಕೊಡುವಂತಹ ಒಂದು ಉತ್ತಮ ಕಾರ್ಯಕ್ರಮವೇ ಮಕ್ಕಳ ಸಂತೆ ಎಂದು ರಚನಾ ಪಬ್ಲಿಕ್ ಶಾಲೆಯ ಮುಖ್ಯಸ್ಥ ಪ್ರಕಾಶ್ ಅವರು ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳದ ರಚನಾ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಸಂತೆ ಹಾಗೂ ಆಹಾರಮೇಳ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಕೇವಲ ಶೈಕ್ಷಣಿಕ ಜ್ಞಾನವಷ್ಟೇ ಅಲ್ಲದೆ ಪ್ರಾಪಂಚಿಕ ಜ್ಞಾನವನ್ನು ತಿಳಿಸುವಂತಹ ಉದ್ದೇಶ ಇದಾಗಿದೆ. ಮಕ್ಕಳಲ್ಲಿ ಆರ್ಥಿಕ ಜ್ಞಾನಮಟ್ಟವನ್ನು ಮತ್ತು ಗ್ರಾಮೀಣ ಭಾಗದ ಜನರ ಜೀವನ ಹೇಗಿರುತ್ತದೆಂಬುದನ್ನು ಮಕ್ಕಳ ಸಂತೆ ಮತ್ತು ಆಹಾರ ಮೇಳದಲ್ಲಿ ಅವರು ಪ್ರತ್ಯಕ್ಷವಾಗಿ ನೋಡುವ ಮೂಲಕ ಅದನ್ನು ತಿಳಿಯುವಂತಹ ಒಂದು ಉತ್ತಮ ವೇದಿಕೆ ಇದಾಗಿದೆ ಎಂದರು.

ಕಾರ್ಯದರ್ಶಿ ಸುನಿತಾ ಅವರು ಮಾತ ನಾಡಿ, ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳ ವ್ಯವಹಾರ ಜ್ಞಾನವನ್ನು ಗುರುತಿಸಲು ಮಕ್ಕಳ ಸಂತೆ ಕಾರ್ಯಕ್ರಮ ಸಹಕಾರಿ. ಮಕ್ಕಳಿಗೆ ಪಠ್ಯ ವಿಷಯದ ಜೊತೆಗೆ ಸಹಪಠ್ಯ ಚಟುವಟಿಕೆಗಳನ್ನು ನಡೆಸುವುದರಿಂದ ಅವರ ಬೌದ್ಧಿಕ ಜ್ಞಾನ ವಿಕಾಸನ ಮತ್ತು ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಮಕ್ಕಳಲ್ಲಿ ಲೆಕ್ಕಾಚಾರ ಪ್ರವೃತ್ತಿ ಹಾಗೂ ಗ್ರಾಹಕರೊಂದಿಗೆ ವರ್ತಿಸುವ ವ್ಯವಹಾರ ಜ್ಞಾನ ಹೆಚ್ಚುತ್ತದೆಂದು ತಿಳಿಸಿದರು.

ಮಕ್ಕಳ ಸಂತೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿ ಪ್ರಾರ್ಥನಾ ಮಾತನಾಡಿ, ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ. ಕೃಷಿ ಚಟುವಟಿಕೆ ಮಾಡುವ ಸಂದರ್ಭದಲ್ಲಿ ಸರಿಯಾದ ಮಳೆ ಬೆಳೆ ಬರು ವುದಿಲ್ಲ. ಇನ್ನು ಕಷ್ಟಪಟ್ಟು ಬೆಳೆ ಬಂದಾಗ ಮಳೆ ಬಂದು ಎಲ್ಲವೂ ಕೂಡ ನೀರು ಪಾಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ರೈತ ತಾನು ಬೆಳೆದ ಬೆಳೆಗೆ ಸರಿಯಾದ ಬೆಂಬಲ ಬೆಲೆ ಸಿಗದೇ ಸಂಕಷ್ಟಕ್ಕೆ ಒಳಗಾಗಿದ್ದಾನೆ. ತಾನು ಕೃಷಿಗೆ ಹಾಕಿದ ಬಂಡವಾಳದ ಒಂದಿಷ್ಟಾದರೂ ಬಂದರೆ ಸಾಕು ಎನ್ನುವ ದೃಷ್ಟಿಯಲ್ಲಿ ಸಂತೆ ವ್ಯಾಪಾರದಲ್ಲಿ ಗ್ರಾಹಕರು ಕಡಿಮೆಗೆ ಕೇಳಿದರೂ ಕೊಟ್ಟು ಸುಮ್ಮನಾಗಿ ಬಿಡುತ್ತಾನೆ. ಇದು ಇವತ್ತಿನ ಮಕ್ಕಳ ಸಂತೆಯಲ್ಲಿಯೂ ಗ್ರಾಹಕರು ನಮ್ಮ ವಸ್ತುವನ್ನು ಮೂಲ ಬೆಲೆಗಿಂತ ಅರ್ಧ ಬೆಲೆಗೆ ಕೊಡಿ ಎಂದು ಕೇಳಿದಾಗ ರೈತರ ಬದುಕು ಏನೆಂಬುದು ಅರ್ಥ ಆಯ್ತು ಎಂದರು.

ವಿದ್ಯಾರ್ಥಿಗಳು ಉತ್ಸಾಹದಿಂದ ವಿವಿಧ ರೀತಿಯ ತಿಂಡಿ ತಿನಿಸು, ವಿವಿಧ ಬಗೆಯ ತರಕಾರಿಗಳು, ಹಣ್ಣು ಹಂಪಲು, ಪಾನಿಪುರಿ, ಸಲಾಡ್, ಚಹಾ-ಬಿಸ್ಕತ್ತ ಸೇರಿ ಇತರೆ ಪದಾರ್ಥಗಳನ್ನು ಮಾರಾಟ ಮಾಡಿ ಸಂಭ್ರಮಿಸಿದರು. ಪಾಲಕರು ಮಕ್ಕಳು ತಯಾರಿಸಿದ ಪದಾರ್ಥಗಳ ರುಚಿ ಹಾಗು ಸಂತೆಯಲ್ಲಿ ಪದಾರ್ಥಗಳನ್ನು ಖರೀದಿಸಿ ಮಕ್ಕಳ ವ್ಯವಹಾರ ಜ್ಞಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮಕ್ಕಳ ಸಂತೆ ಎಂದರೆ ಶಾಲೆಗಳಲ್ಲಿ ಅಥವಾ ಸಮುದಾಯಗಳಲ್ಲಿಆಯೋಜಿಸಲಾಗುವ ಒಂದು ವಿಶಿಷ್ಟ ಕಾರ್ಯಕ್ರಮವಾಗಿದ್ದು, ಮಕ್ಕಳು ಸ್ವತಃ ವ್ಯಾಪಾರಿಗಳಾಗಿ ಹಣ್ಣು-ಹಂಪಲು, ತಿನಿಸುಗಳು, ಗೃಹೋಪಯೋಗಿ ವಸ್ತುಗಳನ್ನು ಮಾರಾಟ ಮಾಡುವ ಮೂಲಕ ತಮ್ಮ ವ್ಯವಹಾರಿಕ ಜ್ಞಾನ ಲೆಕ್ಕಾಚಾರ, ಗ್ರಾಹಕರೊಂದಿಗೆ ವ್ಯವಹರಿಸುವ ಕೌಶಲ್ಯವನ್ನು ಕಾರ್ಯಕ್ರಮದಲ್ಲಿ ಕಲಿಯುತ್ತಾರೆ. ಸ್ವಾವಲಂಬನೆಯ ಪಾಠಗಳನ್ನು ಕಲಿಯುವುದರ ಜೊತೆಗೆ ಮಕ್ಕಳಲ್ಲಿ ಸೃಜನಶೀಲತೆ, ಆರ್ಥಿಕ ಸಾಕ್ಷರತೆ ಮತ್ತು ಆತ್ಮವಿಶ್ವಾಸವನ್ನು ನೀಡುವ ಮಕ್ಕಳ ಸಂತೆ ಕೇವಲ ಒಂದು ವಿನೋದದ ಕಾರ್ಯಕ್ರಮವಲ್ಲ, ಬದಲಿಗೆ ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕವಾದ ಒಂದು ಶೈಕ್ಷಣಿಕ ಮತ್ತು ಸಾಮಾಜಿಕ ವೇದಿಕೆ ಎಂದರೆ ತಪ್ಪಾಗದು.

ಶಾಲೆಯ ಮುಂಭಾಗ ಟೇಪ್ ಕತ್ತರಿಸುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಮತ್ತು ಪೋಷಕರು ಚಾಲನೆ ನೀಡಿದರು. ಮುಖ್ಯ ಶಿಕ್ಷಕ ಮಂಜುನಾಥ್, ಸಹ ಶಿಕ್ಷಕರಾದ ಸೋಮಶೇಖರ್, ಶಶಿಕುಮಾರ್, ಸಂದೇಶ, ಶೃತಿ, ಸುವರ್ಣ, ಪ್ರೀತಿ, ರಕ್ಷಿತಾ, ಗಂಗಾ ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019